# ಕರ್ನಾಟಕ ಸರ್ಕಾರ

# ಜೀವರಾಶಿಯ ಉಳಿವಿಗಾಗಿ

## (ತರಬೇತಿ ಕೈಪಿಡಿ)


ಇಂದ

**ಡಾ|| ಆರ್.ಸಿ.ಪ್ರಜಾಪತಿ, ಭಾ.ಅ.ಸೇ.**

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಹಾಗೂ ಸದಸ್ಯ ಕಾರ್ಯದರ್ಶಿ


## ಕರ್ನಾಟಕ ಜೀವವೈವಿಧ್ಯ ಮಂಡಳಿ


ಡಿಸೆಂಬರ್ – 2007



ನೆಲಮಹಡಿ, 'ವನವಿಕಾಸ', 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03.

ಫೋನ್.ನಂ.23448783, ಫ್ಯಾಕ್ಸ್-080-23440535,

Email:kbb.kar@gmail.com, Web:kbbindia.org

# ಮುನ್ನುಡಿ

ಭಾರತ ದೇಶವು ಅಗಾಧ ಜೀವವೈವಿದ್ಯಕ್ಕೆ ಹೆಸರುವಾಸಿಯಾಗಿದೆ. ಹನ್ನೆರಡು ಮಹಾ ಜೀವವೈವಿದ್ಯ ರಾಷ್ಟ್ರಗಳಲ್ಲಿ ಭಾರತವನ್ನು ಒಂದೆಂದು ಗುರುತಿಸಲಾಗಿದೆ. ಪ್ರಪಂಚದ 25 ಸೂಕ್ಷ್ಮ ಜೀವವೈವಿಧ್ಯ ತಾಣಗಳಲ್ಲಿ ಭಾರತವು ಎರಡನ್ನು ಹೊಂದಿದೆ. (ಪೂರ್ವ ಹಿಮಾಲಯ ಮತ್ತು ಪಶ್ಚಿಮ ಘಟ್ಟಗಳು). ಮನುಕುಲದ ಉಳಿವಿಗೆ ಪರಿಸರದ ಸಮತೋಲನಕ್ಕೆ ಜೀವವೈವಿಧ್ಯ ಸಂರಕ್ಷಣೆ ಅತ್ಯಂತ ಅವಶ್ಯಕವಾಗಿರುತ್ತದೆ. ಜಗತ್ತಿನಾದ್ಯಂತ ಜೀವವೈವಿಧ್ಯವನ್ನು ನಿರಂತರವಾಗಿ ಅನಿಯಂತ್ರಿತವಾಗಿ ಬಳಸುತ್ತಿರುವುದರಿಂದ ಅನೇಕ ಸಸ್ಯ, ಪ್ರಾಣಿ ಪ್ರಭೇಧಗಳು, ಅವಾಸಸ್ಥಾನಗಳ ನಾಶದಿಂದ ಅಳಿವಿನಂಚಿನಲ್ಲಿದೆ. ಮಾನವಕೃತ ಅಭಿವೃದ್ಧಿ ಪರ ಚಟುವಟಿಕೆಗಳಿಂದ ಅನೇಕ ಸಸ್ಯ ಪ್ರಾಣಿ ಮತ್ತು ಪಕ್ಷಿ ಪ್ರಭೇಧಗಳ ನಾಶವಾಗಿರುತ್ತದೆ. ಜಾಗತಿಕ ಸಮುದಾಯವು ಜೀವವೈವಿಧ್ಯ ಮಹತ್ವವನ್ನು ಮನಗಂಡು 1992ರ ಜೂನ್ 5 ರಂದು ಬ್ರೆಜಿಲ್ ದೇಶದ ರಿಯೋ ಡಿ ಜನ್ಯೆರೋದಲ್ಲಿ ನಡೆದ ಭೂಶೃಂಗ ಸಭೆಯಲ್ಲಿ ಜೀವವೈವಿಧ್ಯ ಒಡಂಬಡಿಕೆಗೆ ಅಂಕಿತ ಹಾಕಲಾಯಿತು. ಈ ಒಡಂಬಡಿಕೆಯು ಜೀವವೈವಿಧ್ಯದ ಮೇಲೆ ಅಯಾ ರಾಷ್ಟ್ರದ ಸಾರ್ವಭೌಮತ್ವವನ್ನು ಅಂಗೀಕರಿಸುತ್ತದೆ. ಜೀವವೈವಿಧ್ಯ ಒಡಂಬಡಿಕೆಯ ಆಶಯಗಳಾದ ಜೀವವೈವಿಧ್ಯ ಸಂರಕ್ಷಣೆ, ಅವುಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳು ಹಾಗೂ ಜ್ಞಾನ ಬಳಕೆಯಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆ ಈ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಜೈವಿಕವೈವಿಧ್ಯ ಅಧಿನಿಯಮ 2002ನ್ನು ಭಾರತ ಸರ್ಕಾರವು ಜಾರಿಗೊಳಿಸಿದೆ. ಈ ಕಾಯ್ದೆಯನ್ವಯ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿ ಸಿದ್ದಪಡಿಸಬೇಕಾಗುತ್ತದೆ.

ಡಾ. ಟಿ.ಸಿ. ತಾರಾನಾಥ್, ಕಾರ್ಯನಿರ್ವಹಣಾಧಿಕಾರಿ (ಸಸ್ಯಶಾಸ್ತ್ರ) ಇವರು ಇಂಗ್ಲೀಷ್ ಭಾಷೆಯಲ್ಲಿ ತಯಾರಿಸಿರುವ ಜೀವರಾಶಿಯ ಉಳಿವಿಗಾಗಿ (ತರಬೇತಿ ಕೈಪಿಡಿ) ಯನ್ನು ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ. ಇವರ ಈ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಲಾಗಿದೆ.

**(ಡಾ. ಆರ್.ಸಿ.ಪ್ರಜಾಪತಿ)**
**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**ಹಾಗೂ ಸದಸ್ಯ ಕಾರ್ಯದರ್ಶಿ**
**ಕರ್ನಾಟಕ ಜೀವವೈವಿಧ್ಯ ಮಂಡಳಿ**

ಪೃಥ್ವಿಯ ಜೀವ ಸಂಕುಲ ವೈವಿಧ್ಯದ ಆಗರ. ಜಗದ ಜೀವವೈವಿಧ್ಯ ಮಾನವ ಬದುಕಿನ ಮೂಲಭೂತ ನಿರ್ವಹಣೆಗೆ ಅನುದಿನ ಅಧಾರವಾಗಿರುವುದಲ್ಲದೆ ಅಗಾಧವಾದ ಪ್ರಾಕೃತಿಕ ಸೇವೆಗಳನ್ನು ನೀಡುತ್ತದೆ. ಜೈವಿಕ ಸಮೃದ್ಧಿಯು ಭೌಗೋಳಿಕ ಮತ್ತು ವಾತಾವರಣಕ್ಕನುಗುಣವಾಗಿ ವಿವಿಧ ಸಸ್ಯ, ಪ್ರಾಣಿ, ಸೂಕ್ಷ್ಮಾಣು ಜೀವಿಗಳು ವೈವಿಧ್ಯಮಯವಾಗಿರುತ್ತದೆ. ವಾತಾವರಣಕ್ಕನುಗುಣವಾಗಿ ಬದಲಾಗುವ ವಂಶವಾಹಿಗಳು ಹೊಸ ಪ್ರಭೇಧಗಳ ಉಗಮಕ್ಕೆ ನಾಂದಿಯಾಗುತ್ತದೆ. ಜೀವಗಳ ಪರಿಸರದ ಹೊಡನಾಟ, ಹೊಂದಾಣಿಕೆ ಜೀವವಿಕಾಸದ ದಾರಿಯಲ್ಲಿ ಅನಿವಾರ್ಯ ಭೂಮಿಯ ಜೀವನಾಧಾರ ಘಟಕಗಳಾದ ನೆಲ, ಜಲ ಮತ್ತು ವಾಯುಗೋಳಗಳನ್ನು ಅವಲಂಬಿಸಿ ಜೀವಿಗಳು ವಾಸಿಸುತ್ತದೆ. ಜೀವಮಯವಾದ ಭೂಮಿಯ ಗೋಳಕ್ಕೆ ಜೀವಗೋಲ ಎಂದು ಕರೆಯುತ್ತಾರೆ. ಸೂರ್ಯನ ಶಕ್ತಿ ಜೀವಜಗತ್ತಿನ ಚಟುವಟಿಕೆಗಳಿಗೆ ಆಧಾರವಲ್ಲದೆ, ಭೌತಿಕ ಮತ್ತು ರಾಸಾಯನಿಕ ಶಕ್ತಿಗಳ ಸಂಚಯನ ನಿಸರ್ಗದಲ್ಲಿಯ ನಿರಂತರ ಚಟುವಟಿಕೆಗಳಿಗೆ ಕಾರಣವಾಗಿದೆ. ಭೂಮಿಯ ಅಖಂಡ ಜೀವವೈವಿಧ್ಯಕ್ಕೆ ಶಕ್ತಿಯ ಚಲನೆ ಮತ್ತು ಜೀವಭೂರಾಸಾಯನಿಕ ಚಕ್ರ ಕಾರಣೀಭೂತವಾಗಿರುತ್ತದೆ. ಸಮೃದ್ಧ ಜೀವವೈವಿಧ್ಯದ ಉಪಯೋಗ, ಸೇವೆಗಳನ್ನು ಮಾನವ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಕಂಡು ಕೊಂಡಿದ್ದಾನೆ. ಜೀವವೈವಿಧ್ಯವನ್ನು ಮೂರು ಹಂತದಲ್ಲಿ ಗುರುತಿಸಲಾಗಿದೆ. ವಂಶವಾಹಿ ವೈವಿಧ್ಯ (Genetic Diversity) ಪ್ರಭೇಧ ವೈವಿಧ್ಯ (Species Diversity) ಮತ್ತು ಜೀವವಾಸಿಗಳ ವೈವಿಧ್ಯ (Eco system Diversity).

ಭೂಮಿಯ ಮೇಲಿನ ಜೀವ ರಾಶಿಯ ಒಟ್ಟು ವೈವಿಧ್ಯ ಮತ್ತು ಅವುಗಳ ನಡುವಿನ ಭಿನ್ನತೆಗಳನ್ನು ಇಡಿಯಾಗಿ ಪ್ರತಿನಿಧಿಸುವ ಪದ್ದತಿ ಜೀವವೈವಿಧ್ಯ ಈ ವೈವಿಧ್ಯ ವಂಶವಾಹಿಯಲ್ಲಿರಬಹುದು. ಪ್ರಭೇಧಗಳಿರಬಹುದು ಮತ್ತು ಜೀವವಾಸಗಳಲ್ಲಿರಬಹುದು. ಜೀವವೈವಿಧ್ಯ ಕೇವಲ ಸಂಶೋಧನೆಗೆ ಮಾತ್ರವಲ್ಲದೆ ಅಭಿವೃದ್ಧಿ ಯೋಜನೆ ಮತ್ತು ನೀತಿ ನಿರೂಪಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

### ವಂಶವಾಹಿ ಅಥವಾ ಜೀನುಗಳ ವೈವಿಧ್ಯ (Genetic Diversity)

ಮಾವು, ಭತ್ತ, ರಾಗಿ, ಗೋಧಿ ಸಿಂಹ, ಹುಲಿ, ಕರಡಿ ಬೆಕ್ಕು ಇತ್ಯಾದಿ ಪ್ರಭೇದಗಳಲ್ಲಿ ಭಿನ್ನತೆ ಇರುತ್ತದೆ. ಇವುಗಳಿಗೆ ತಳಿಗಳು ಎಂದು ಕರೆಯುತ್ತಾರೆ. ಈ ಎಲ್ಲಾ ತಳಿ ಭಿನ್ನತೆಗಳಿಗೆ ಮೂಲಕಾರಣ ಅವುಗಳು ಒಳಗೊಂಡಿರುವ ಜೀನುಗಳ ವೈವಿಧ್ಯ. ಜೀವ ಜಾತಿಯೊಂದರ ಪ್ರತಿ ತಳಿಗಳಲ್ಲೂ ಒಂದಷ್ಟು ವಿಶಿಷ್ಟ ಜೀನುಗಳಿರುತ್ತದೆ. ಜೀವ ಜಾತಿಗಳ ಮತ್ತು ಪ್ರತಿಜಾತಿಯೊಳಗಿನ ತಳಿಗಳ ನಡುವಿನ ವ್ಯತ್ಯಾಸಗಳಿಗೆ ಜೀವಜಗತ್ತಿನ ಮೂಲಕಣಗಳಾದ ಜೀನುಗಳೇ ಕಾರಣ ಇದನ್ನೆ ವಂಶವಾಹಿ (ಜೀನು) ವೈವಿಧ್ಯ ಎನ್ನುವುದು. ಬತ್ತದ ಬೆಳೆಯಲ್ಲಿ ಸಾವಿರಾರು ತಳಿಗಳಿರುವುದು ಹಸುವಿನ ತಳಿಗಳು ಪರಸ್ಪರ ಭಿನ್ನವಾಗಿರುವುದು ಈ ಬಗೆಯ ವಂಶವಾಹಿ ವೈವಿಧ್ಯದಿಂದಾಗಿದೆಯೇ.

ವನ್ಯ ಪ್ರಭೇಧಗಳು ಮುಖ್ಯವಾದ ಮತ್ತು ವಿಶಿಷ್ಟವಾದ ಜೀನುಗಳ ನೆಲೆಯಾಗಿದೆ. ವಂಶವಾಹಿ ವೈವಿಧ್ಯ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಗಮನಸೆಳೆದಿರುತ್ತದೆ. ಏಕೆಂದರೆ ಜೈವಿಕ ತಂತ್ರಜ್ಞಾನದ ಮೂಲಕ ಜೀನುಗಳನ್ನು ಔಷಧಿ ತಯಾರಿಸಲು ಪರಿಸರ ಮಾಲಿನ್ಯ ನಿಯಂತ್ರಿಸಲು ಜೈವಿಕ ಗಣಿಗಾರಿಕೆಗೆ ಇತ್ಯಾದಿಯಲ್ಲಿ ಬಳಸಬಹುದು.

ಪ್ರಭೇದ ವೈವಿಧ್ಯ (Species Diversity)

ಪ್ರಭೇದ ಜೀವಿ ವರ್ಗೀಕರಣದಲ್ಲಿ ಮೂಲಭೂತ ಹಂತ. ಒಂದೇ ತರಹದ ಜೀನುಗಳನ್ನು ಹೊಂದಿರುವ ಸಸ್ಯ ಅಥವಾ ಪ್ರಾಣಿಗಳ ಸಂತಾನಭಿವೃದ್ಧಿಯಿಂದ ಫಲಿತ ಸಂತತಿಯನ್ನು ಉತ್ಪಾದಿಸುತ್ತದೆ. ಈ ಗುಂಪಿಗೆ ಪ್ರಭೇದ ಎಂದು ಕರೆಯುತ್ತಾರೆ. ವಿವಿಧ ಪ್ರಭೇಧಗಳು ಒಂದಕ್ಕಿಂತ ಒಂದು ಭಿನ್ನವಾಗಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿರುವ ವಿವಿಧ ಪ್ರಭೇಧಗಳು ಗುಂಪಿಗೆ ಪ್ರಭೇದ ವೈವಿಧ್ಯ ಎಂದು ಕರೆಯುತ್ತಾರೆ.

ಪ್ರಭೇಧ ಸಮೃದ್ಧಯೆಂದರೆ ಹೆಚ್ಚಿನ ಸಂಖ್ಯೆಯ ವಿವಿಧ ಪ್ರಭೇದಗಳಿರುವ ಪ್ರದೇಶ ಯಾವುದೇಸ್ಥಳದ ದೇಶದ ಜೀವವೈವಿಧ್ಯತೆಯನ್ನು ಪ್ರಭೇದ ವೈವಿಧ್ಯದಿಂದ ಗುರುತಿಸುತ್ತಾರೆ. ಜಗತ್ತಿನಲ್ಲಿ ಈ ವರೆಗೆ ದಾಖಲಿಸಿದ ಪ್ರಭೇದಗಳ ಸಂಖ್ಯೆ.1.7 ಮಿಲಿಯನ್ ಹಾಗೂ ಪೃಥ್ವಿಯ ಮೇಲೆ ಒಟ್ಟು 10 ರಿಂದ 15 ಮಿಲಿಯನ್ ಪ್ರಭೇದಗಳಿವೆ ಎಂದು ಅಂದಾಜಿಸಲಾಗಿದೆ.

ಜೀವವಾಸಗಳ ವೈವಿಧ್ಯ (Eco system Diversity)

ಶತಕೋಟಿ ವರ್ಷಗಳಿಂದ ಜೀವಿಗಳು ಪರಸ್ಪರ ಮತ್ತು ಭೂಮಿಯ ಅಜೈವಿಕ ಘಟಕಗಳೊಂದಿಗೆ ಚಲನಶೀಲ ಕ್ರೀಯೆ ಮತ್ತು ಪ್ರಕ್ರೀಯೆಗಳಿಂದ ವೈವಿಧ್ಯಮಯ ಪ್ರಭೇಧಗಳ ಉಗಮ ಜೀವವಿಕಾಸದ ಹಾದಿಯಲ್ಲಿ ಉಂಟಾಗಿದೆ. ಜೀವಿಗಳ ಮತ್ತು ಸಂಬಂಧಿತ ಭೌಗೋಳಿಕ ವ್ಯವಸ್ಥೆಯ ಘಟಕಕ್ಕೆ ಜೀವವಾಸ ಎಂದು ಕರೆಯುತ್ತಾರೆ. ಈ ಚಲನಶೀಲ ಭೂಮಿಯ ಘಟಕಗಳಲ್ಲಿ ಅರಣ್ಯಹುಲ್ಲುಗಾವಲು, ಮರುಭೂಮಿ, ಕಾಂಡ್ಲವನ, ಜಾವುಗುಪ್ರದೇಶ, ಕೆರೆ, ಹೊಳೆ, ಸಾಗರ ಇತ್ಯಾದಿ ಸೇರಿರುತ್ತದೆ.

ಪ್ರತಿಯೊಂದು ಜೀವವಾಸ ಘಟಕ ಇತರ ಜೀವವಾಸಗಳಿಂದ ರಚನೆ ಮತ್ತು ಕಾರ್ಯಚಟುವಟಿಕೆಗಳಲ್ಲಿ ಭಿನ್ನವಾಗಿರುತ್ತದೆ. ಈ ಜೀವವಾಸ ವ್ಯವಸ್ಥೆ ಹಲವು ಹೆಕ್ಟೇರ್ ಭೂ ಪ್ರದೇಶದಿಂದ ಹಿಡಿದು ಸಾವಿರಾರು ಹೆಕ್ಟೇರ್ ಭೂ ಪ್ರದೇಶ ಹೊಂದಿರುಬಹುದು. ಸಸ್ಯ, ಪ್ರಾಣಿ ಸೂಕ್ಷ್ಮಾಣು ಜೀವಿಗಳು ಮತ್ತು ಸಂಬಂಧಿತ ಭೂಭೌಗೋಳಿಕ ಜೀವ ಪೊಷಕ ಘಟಕಗಳಾದ ನೆಲ, ಜಲ ಮತ್ತು ಹವಾಮಾನ ಹೊಂದಿರುವ ವ್ಯವಸ್ಥೆಗೆ ಜೀವವಾಸ ವ್ಯವಸ್ಥೆ ಎಂದು ಕರೆಯುತ್ತಾರೆ. ವೈವಿಧ್ಯಮಯುವಾದ ಜೀವಾವಾಸ ವ್ಯವಸ್ಥೆಗೆ ಜೀವಾವಾಸ ವೈವಿಧ್ಯತೆ ಎಂದು ಕರೆಯುತ್ತಾರೆ.

## ಜೀವವೈವಿಧ್ಯ ಸೂಕ್ಷ್ಮ ತಾಣಗಳು (Hotspots of Biodiversity)

ಜೀವವೈವಿಧ್ಯ ಭೂಮಿಯ ಮೇಲೆ ಸಮಾನನಾಗಿ ಹಂಚಿಗೆಯಾಗಿಲ್ಲ. ಹೆಚ್ಚಿನ ಜೀವವೈವಿಧ್ಯ ಭೂಮಧ್ಯಭಾಗದಲ್ಲಿ ಕೇಂದ್ರಕೃತಗೊಂಡಿರುತ್ತದೆ. ಪ್ರಭೇಧಗಳು ಕೆಲವು ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾಗಿದ್ದು ಬೇರೆ ಯಾವುದೇ ಪ್ರದೇಶದಲ್ಲಿಯೂ ಕಂಡು ಬರುವುದಿಲ್ಲ. ಅಂತಹ ಪ್ರಭೇಧಗಳನ್ನು ಸೀಮಿತ ವ್ಯಾಪ್ತಿಯ ಸ್ಥಳೀಯ ಪ್ರಭೇಧಗಳು (ಎಂಡಮಿಕ್) ಎಂದು ಕರೆಯುತ್ತಾರೆ. 1998 ರಲ್ಲಿ ಆಂಗ್ಲ ಪರಿಸರ ತಜ್ಞ ನಾರ್ಮನ್ ಮೇಯರ್ ರವರು ಜೀವವೈವಿಧ್ಯ ಸೂಕ್ಷ್ಮ ನೆಲೆಗಳ ಸಿದ್ಧಾಂತವನ್ನು ಪ್ರತಿಪಾದಿಸಿರುತ್ತಾರೆ. (Reports of Biodiversity) ಅದಕ್ಕನುಗುಣವಾಗಿ ಈ ಮನ್ನಣೆಗೆ ಪಾತ್ರವಾಗಬೇಕಾದರೆ ಭೂ ಪ್ರದೇಶವೊಂದು ಕನಿಷ್ಟ 1,500 ಸೀಮಿತ ಸ್ಥಳೀಯ ಸಸ್ಯ ಪ್ರಭೇಧಗಳಿಗೆ ಆಶ್ರಯ ನೀಡಿರಬೇಕು. ಮಿತಿಮೀರಿದ ಮಾನವ ಹಸ್ತಕ್ಷೇಪದಿಂದಾಗಿ ಪ್ರಸಕ್ತ ಈ ಅಮೂಲ್ಯ ಜೀವವೈವಿಧ್ಯವನ್ನು ಕಳೆದು ಕೊಳ್ಳುವ ಅಪಾಯ ಎದುರಿಸುತ್ತಿರುವ ಪ್ರದೇಶಗಳಿಗೆ ಜೀವವೈವಿಧ್ಯ ಸೂಕ್ಷ್ಮ (ಪ್ರಸ್ತುತ ವರದಿಯ ಪ್ರಕಾರ ಒಟ್ಟು 34 ಸೂಕ್ಷ್ಮ ತಾಣಗಳಿವೆ). ನೆಲೆಗಳು ಎಂದು ಕರೆಯುತ್ತಾರೆ. ವಿಶ್ವದ ಉದ್ದಗಲಕ್ಕೆ ಸುಮಾರು 25 ಇಂತಹ ಸೂಕ್ಷ್ಮನೆಲೆಗಳನ್ನು ಗುರುತಿಸಲಾಗಿದೆ.

ಇವುಗಳಲ್ಲಿ ಭಾರತದ ಪೂರ್ವ ಹಿಮಾಲಯ ಮತ್ತು ಪಶ್ಚಿಮ ಘಟ್ಟಗಳು ಸೇರಿರುತ್ತದೆ. ವಿಶ್ವವೇದಿಕೆಯಲ್ಲಿ ಭಾರತ ಜೈವಿಕವಾಗಿ ಸಂಪದ್ಭರಿತವಾದಂತಹ ರಾಷ್ಟ್ರಗಳ ಸಾಲಿನಲ್ಲಿ ಗುರುತಿಸಿಕೊಳ್ಳುವ ಹಿರಿಮೆಯುಳ್ಳದ್ದಾಗಿರುತ್ತದೆ. ಜೀವೋತ್ಕರ್ಷಕ್ಕೆ ಪ್ರೇರಕವಾಗಿರುವಂತಹ ಅಂತರ್ಗತ ಗುಣವುಳ್ಳ ಉಷ್ಣವಲಯ ಮತ್ತು ಉಪ ಉಷ್ಣವಲಯಗಳಲ್ಲಿ ಚಾಚಿಕೊಂಡಿರುವ ಭಾರತದ ಭೌಗೋಳಿಕ ಸ್ಥಾನ ಇದಕ್ಕೆ ಮುಖ್ಯ ಕಾರಣ. ಅದುದರಿಂದ ಭಾರತವನ್ನು ಪ್ರಪಂಚದ ಹನ್ನೆರಡು ಬೃಹತ್ ಜೀವವೈವಿಧ್ಯದ ರಾಷ್ಟ್ರಗಳಲ್ಲಿ ಒಂದನ್ನಾಗಿಸುವಲ್ಲಿ ತಮ್ಮ ಕೊಡುಗೆ ನೀಡಿವೆ.

ಭೂಮಿಯ ಜೀವರಾಶಿ ಅಗಾಧ, ವೈವಿಧ್ಯಮಯ ಬರಿಕಣ್ಣಿಗೆ ಕಾಣದ ಸೂಕ್ಷ್ಮಾಣುಜೀವಿಗಳಿಂದ ಸಾಗರದ ಬೃಹತ್ ನೀಲ ತಿಮಿಂಗಲಗಳವರೆಗೂ ವಿಸ್ತಾರ. ಜೀವವೈವಿಧ್ಯ ಮಾನವರ ಪಾಲಿಗಂತೂ ನಿಧಿಯ ಭಂಡಾರ ಆಹಾರ, ಔಷಧಿ ಕೃಷಿ ಜಾದ್ಯೋಗಿಕ ರಂಗದಲ್ಲಿ ಬಳಸಲ್ಪಡುವ ಹೆಚ್ಚಿನ ಕಚ್ಚಾ ಪದಾರ್ಥಗಳು ವಿವಿಧ ಜೀವ ಪ್ರಭೇಧಗಳಿಂದಲೇ ಲಭಿಸುತ್ತದೆ.

## ಸಸ್ಯ ವೈವಿಧ್ಯದ ಉಪಯೋಗಗಳು:

ಭತ್ತ ಬಹುಮುಖ್ಯ ಆಹಾರ ಬೆಳೆಯಾಗಿದೆ ಮಲ್ಲಿಗೆ, ತುಳಸಿ ಗಂಧ, ಸಂಪಿಗೆ ನಿಂಬೆಹುಲ್ಲು ಇವುಗಳಿಂದ ಸುಗಂಧ ದ್ರವ್ಯಗಳನ್ನು ಪಡೆಯುತ್ತಾರೆ. ಅಂಜೂರ, ನೀಲಿ, ಹಳದಿ, ಕಾಡುಗೇರು, ಸಪ್ಪಾನ್, ಬೆಪ್ಪಾಲೆ, ರಕ್ತ ಚಂದನ ಮುಂತಾದವುಗಳನ್ನು ನೈಸರ್ಗಿಕ ಬಣ್ಣಗಳ ಉತ್ಪಾದನೆಯಲ್ಲಿ ಬಳಸುತ್ತಾರೆ. ಅಳಲೆ, ತಾರೆ ಮರಗಳ ಭಾಗಗಳನ್ನು ಚರ್ಮ ಹದ ಮಾಡಲಿಕ್ಕೆ ಉಪಯೋಗಿಸುತ್ತಾರೆ. ಕರಿಜಾಲಿ, ಧೂಪ, ಮಡ್ಡಿಸಾಂಬ್ರಾಣಿ, ಗುಗ್ಗಳ, ದಿಂಡಿಗ, ಬೂರುಗ ಮುಂತಾದವುಗಳಿಂದ ಅಂಟು ಮತ್ತು ರೆಸಿನ್‌ನ್ನು ಉತ್ಪಾದಿಸುತ್ತಾರೆ. ಬೆತ್ತ ಮತ್ತು ಬಿದರನ್ನು ಗುಡಿ ಕೈಗಾರಿಕಗೆಗಳಲ್ಲಿ ಬಳಸುತ್ತಾರೆ. ಪಾತಾಳಮರ, ಸಸ್ಯಗಳಿಂದ ಕಿತ್ತಾಳೆ, ಸೆಣಬು, ಎಡಮೂರಿ ನಾರನ್ನು ಉತ್ಪಾದಿಸುತ್ತಾರೆ ಹತ್ತಿಯನ್ನು ಬಟ್ಟೆ ತಯಾರಿಸಲು ಬಳಸುತ್ತಾರೆ. ತೆಂಗಿನಿಂದ ನಾರನ್ನು ಉತ್ಪಾದಿಸುತ್ತಾರೆ ಭಾರತೀಯ ವೈಧ್ಯ ಪದ್ಧತಿಗಳಾದ ಸಿದ್ದ ಮತ್ತು ಆಯುರ್ವೇದ ಪದ್ಧತಿಯಲ್ಲಿ ಔಷಧಿ ಸಸ್ಯಗಳ ಉಪಯೋಗ ಅಪಾರ ಟಕ್ಸ್‌ಸ್ ಬಕ್ಕೆಟಾವನ್ನು ಕ್ಯಾನ್ಸರ್ ರೋಗದ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಬುಡಕಟ್ಟು ಜನಾಂಗಗಳು ಚಿಕಿತ್ಸೆಗೆ ಔಷಧಿ ಸಸ್ಯಗಳನ್ನು ಅವಲಂಭಿಸಿರುತ್ತಾರೆ. ಸುಮಾರು 600ಕ್ಕೂ ಹೆಚ್ಚು ಅರಣ್ಯ ಸಸ್ಯಗಳನ್ನು ವಿವಿಧ ಔಷಧಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಸಾಂಪ್ರದಾಯಿಕ ಗಿಡಮೂಲಿಕೆಗಳಾದ ಸರ್ಪಗಂಧ ರಕ್ತದೊತ್ತಡ, ಹೃದಯದ ಖಾಯಿಲೆಗಳಿಗೆ ನಿತ್ಯ ಪುಷ್ಪ ಕ್ಯಾನ್ಸರ್‌ಗೆ ಉಪಯುಕ್ತ ಮದ್ದಾಗಿದೆ.

ಶಿಲಿಂದ್ರಗಳು (ಬೂಷ್ಟ) ಅತ್ಯಂತ ಉಪಯುಕ್ತ ಸಸ್ಯವರ್ಗ ಅವುಗಳು ಗಾಳಿ, ನೀರು ಮತ್ತು ಕೊಳೆಯುವ ಜೈವಿಕ ವಸ್ತುಗಳ ಮೇಲೆ ವಾಸಿಸುತ್ತವೆ. ಕರ್ನಾಟಕದ ಜೀವವಾಸವು ಶಿಲಿಂದ್ರಗಳಿಗೆ ಅತ್ಯಂತ ಸೂಕ್ತ ತಾಣವಾಗಿದೆ. ಅದುದರಿಂದ ಶಿಲಿಂದ್ರ ವೈವಿಧ್ಯವು ಹೆಚ್ಚಾಗಿದೆ. ಸೂಕ್ಷ್ಮ ಜೀವಿಗಳ ಸಹಯೋಗದೊಂದಿಗೆ ಜೈವಿಕ ವಸ್ತುಗಳನ್ನು ಸಂಸ್ಕರಿಸಲು (ಕೊಳೆಯಿಸುವಿಕೆಗೆ) ಮಹತ್ವದ ಪಾತ್ರ ವಹಿಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡುತ್ತದೆ ಹಾಗೂ ನಿಸರ್ಗದ ಶುಚಿಕರಣಕ್ಕು ಮಹತ್ವದ ಪಾತ್ರ ವಹಿಸುತ್ತದೆ. ಸೀತಾಳೆ ಬೀಜದ ಅಂಕುರಕ್ಕೆ ಶೀಲಿಂದ್ರ ಸಸ್ಯಗಳು ಮಹತ್ವದ ಪಾತ್ರವಹಿಸುತ್ತದೆ. ಬೇರಿಗಂಟಿ ಬೆಳೆಯುವ ಶಿಲಿಂದ್ರಗಳು ನೀರು ಮತ್ತು ಪೊಷಕಾಂಶಗಳನ್ನು ಹೀರಿಕೊಳ್ಳಲು ಮಹತ್ವದ ಪಾತ್ರ ವಹಿಸುತ್ತದೆ. ನಾಯಿಕೊಡೆಯನ್ನು ರುಚಿಕರ ಮತ್ತು ಪೂಷಕಾಂಶಯುಕ್ತ ಆಹಾರವಾಗಿ ಬಳಸುತ್ತಾರೆ. ನಾಯಿಕೊಡೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ.

ಶಿಲೀಂದ್ರಗಳನ್ನು ಕಾರ್ಬಾನಿಕ್ ಅಮ್ಲ ಆಲ್ಕೊಹಾಲ್, ವಿಟಮಿನ್, ಕಳೆನಾಶಕ ಮತ್ತು ಜೈವಿಕ ಕೀಟನಾಶಕ ಉತ್ಪಾದನೆಗೆ ಬಳಸುತ್ತಾರೆ. ಶಿಲೀಂದ್ರಗಳಿಂದ ಸೈಕ್ಲೊಸ್ಪೊರೀನ್ ಎಂಬ ಔಷಧವನ್ನು ಅಂಗಾಂಗ ಕಸಿ ಯಶಸ್ವಿಯಾಗಲು ಉಪಯೋಗಿಸುತ್ತಾರೆ.

## ಪ್ರಾಣಿ ವೈವಿಧ್ಯ ಉಪಯೋಗಗಳು:

ವನ್ಯ ಪ್ರಾಣಿಗಳು ಮತ್ತು ಅವುಗಳ ಉತ್ಪಾದನೆಗಳು ಮಾನವನಿಗೆ ಬಹುಪಯೋಗಿ, ಮಾನವನು, ಆಡು, ಕುರಿ ಕೋಳಿ, ಬಾತುಕೋಳಿ ಮುಂತಾದವುಗಳನ್ನು ಆಹಾರವಾಗಿ ಬಳಸುತ್ತಾನೆ. ಕರ್ನಾಟಕದ ಕೆರೆ ಕಾಲುವೆಗಳು ಮಿನುಗಳ ವೈವಿಧ್ಯ ಸಮೃದ್ಧಿಯ ತಾಣವಾಗಿದೆ. ಅನಿಯಂತ್ರಿತವಾಗಿ ಕೀಟನಾಶಕಗಳನ್ನು ಉಪಯೋಗಿಸುತ್ತಿರುವುದರಿಂದ ಜಲಚರಗಳು ವಿನಾಶದಂಚಿನಲ್ಲಿದೆ ಹಾವುಗಳ ಮತ್ತು ಮೊಸಳೆ ಚರ್ಮಗಳಿಂದ ಪರ್ಸು ಮತ್ತು ಕೈಚೀಲಗಳನ್ನು ತಯಾರಿಸುತ್ತಾರೆ. ಆನೆ ದಂತಗಳನ್ನು ಗುಡಿಕೈಗಾರಿಕೆಯಲ್ಲಿ ಉಪಯೋಗಿಸುತ್ತಾರೆ.

ವನ್ಯಪ್ರಾಣಿ ವಿಕ್ಷಣಿ ಮತ್ತು ಪರಿಸರ ಪ್ರವಾಸೂದ್ಯಮದ ಮುಖ್ಯ ಆಕರ್ಷಣಿಯಾಗಿದೆಯಲ್ಲದೆ ರಾಜ್ಯದ ಅರ್ಥಿಕಾಭಿವೃದ್ಧಿಗೆ ಕಾರಣವಾಗಿದೆ. ಔಷಧಗಳ ಪರಿಣಾಮ ವಿಷದ ಪರೀಕ್ಷಾರ್ಥ ಪ್ರಯೋಗಗಳಿಗೆ ಪ್ರಾಣಿಗಳನ್ನು ಉಪಯೋಗಿಸುತ್ತಾರೆ. ಆಹಾರ ಸರಪಳಿಯಲ್ಲಿ ಪರಿಸರ ಸಮತೋಲನ ಕಾಪಾಡಲು ಪ್ರಾಣಿಗಳು ಮಹತ್ವದ ಪಾತ್ರ ವಹಿಸುತ್ತದೆ. ಆಹಾರ ಸರಪಳಿಯಲ್ಲಿ ಹಾವುಗಳು ಇಲಿಗಳ ಸಂತತಿಯನ್ನು ನಿಯಂತ್ರಿಸುತ್ತದೆ. ಮಾನವನು ಬಳಸಿ ಬಿಸಾಡಿದ ಆಹಾರ ಪದಾರ್ಥಗಳನ್ನು ನಾಯಿ ಕಾಗೆಗಳು ತಿಂದು ಮಾಲಿನ್ಯ ನಿಯಂತ್ರಿಸಿ ಪರಿಸರವನ್ನು ಶುಚಿಯಾಗಿಡುತ್ತದೆ. ಇವುಗಳಲ್ಲದೆ ಪ್ರಾಣಿಗಳಿಂದ ನಮ್ಮ ಆಹಾರ, ಉಡುಪು ಮನರಂಜನೆ ಔಷಧ ಇತ್ಯಾದಿ ದೊರೆಯುತ್ತದೆ. ಆನೆ, ಹಸು, ಎತ್ತು, ಕುದುರೆ, ಮತ್ತು ನವಿಲು ನಮ್ಮ ಸಂಸ್ಕೃತಿ ಮತ್ತು ಧಾರ್ಮಿಕ ಪರಂಪರೆಯಲ್ಲಿ ಮಹತ್ವದ ಸ್ಥಾನ ಹೊಂದಿರುತ್ತದೆ.

ಪ್ರಾಣಿಗಳಲ್ಲಿ ಕೀಟಗಳ ಗುಂಪು ಮಹತ್ವದ ಸ್ಥಾನ ಹೊಂದಿರುತ್ತದೆ. ಜೀವವೈವಿಧ್ಯತೆಯಲ್ಲಿಯೂ ಅದ್ವತೆಯ ಸ್ಥಾನ ಜೇನು, ರೇಷ್ಮೆಹುಳು, ಅರಗು ಉತ್ಪಾದನೆ ಮತ್ತು ಕೃಷಿಯಲ್ಲಿ ಪೀಡಾಹಾರಿ ಕೀಟಗಳನ್ನು ನಿಯಂತ್ರಿಸಲು ಉಪಯೋಗಿಕರು. ಪರಾಗಸ್ಪರ್ಷದಲ್ಲಿ ಕೀಟಗಳು ಮಹತ್ವದ ಪಾತ್ರ ವಹಿಸುತ್ತದೆ. ಇದರೊಟ್ಟಿಗೆ ಮಾನವನಿಗೆ ಪೀಡಾಹಾರಿ ಕೀಟಗಳ ಹಾವಳಿಯುಂಟು. ಇವುಗಳಲ್ಲಿ ಸೊಳ್ಳೆಗಳು ಮಲೇರಿಯಾ ಮತ್ತು ಅನೆಬಾಹು ರೋಗಗಳನ್ನು ಹರಡುವದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ನೊಣಗಳು ಕಾಲರ ರೋಗಾಣುಗಳನ್ನು ಹರಡುತ್ತದೆ. ಜೇನು ನೋಣಗಳು ಅರ್ಥಿಕ ಮತ್ತು ಆರೋಗ್ಯ ಮೌಲ್ಯವುಳ್ಳ ಜೇನನ್ನು ಉತ್ಪಾದಿಸುತ್ತದೆ. ರೇಷ್ಮೆ ಹುಳುಗಳಿಂದ ರೇಷ್ಮೆ ಉತ್ಪಾದಿಸುತ್ತಾರೆ ಗೃಹ ಕೈಗಾರಿಕೆಗಳಿಗೆ ಅದಾಯದ ಮೂಲವಾಗಿದೆ. ಕೃಷಿ ಮತ್ತು ಅರಣ್ಯ ಕೃಷಿಯಲ್ಲಿ ಕೀಟಗಳ ಸಮಗ್ರ ಪೀಡಾಹಾರಿ ಕೀಟಗಳ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಭಾರತವು ವೈವಿಧ್ಯಮಯ ಜೀವರಾಶಿಗಳ ನಾಡು ಭಾರತವು ಮಹಾ ಜೀವವೈವಿಧ್ಯ ರಾಷ್ಟ್ರಗಳಲ್ಲಿ ಒಂದೆಂದು ಪರಿಗಣಿಲಾಗಿದೆ. ಶೇಕಡ 2.5ರ ಭೂಪ್ರದೇಶದಲ್ಲಿ ಸುಮಾರು ಶೇಕಡಾ 7.8 ರಷ್ಟು ಜಗತ್ತಿನ ದಾಖಲಿಸಿದ ಜೀವವೈವಿಧ್ಯವನ್ನು ಹೊಂದಿದೆ. ಭಾರತವು ಸಮೃದ್ಧ ಜೀವರಾಶಿ ಮತ್ತು ಪಾರಂಪರಿಕ ಜ್ಞಾನವನ್ನು ಹೊಂದಿದೆ.

ಭಾರತವು ಜೀವವೈವಿಧ್ಯ ಒಡಂಬಡಿಕೆಯ ಭಾಗಿದಾರ ರಾಷ್ಟ್ರವಾಗಿದೆ. ಒಡಂಬಡಿಕೆಯ ಜೀವವೈವಿಧ್ಯದ ಮೇಲೆ ಪರಮಾಧಿಕಾರ ಹೊಂದಿದೆ ಅಲ್ಲದೆ ಭಾಗಿದಾರ ರಾಷ್ಟ್ರಗಳನ್ವಯ ಅಯಾ ರಾಷ್ಟ್ರಿಯ ಕಾನೂನಿನ ಚೌಕಟ್ಟಿನೊಳಗೆ ಪರಸ್ಪರ ಜೈವಿಕ ಸಂಪನ್ಮೂಲಗಳ ವಿನಿಮಯಕ್ಕೆ ಅವಕಾಶವಿದೆ. ಅರ್ಟ್ವಿಕಲ್ 8(j) ಯು/ಸ್ಥಳೀಯ ಮತ್ತು ದೇಶಿಯ ಪಾರಂಪರಿಕ ಜ್ಞಾನ ಮತ್ತು ಜೀವವೈವಿಧ್ಯ ಸಂರಕ್ಷಣೆಯ ಪಾರಂಪರಿಕ ವಿಧಾನ ಮತ್ತು ಅವುಗಳ ವಾಣಿಜ್ಯತ್ಮಾಕ ಬಳಕೆಯಿಂದ ದೊರೆಯುವ ಲಾಭಂಶದ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆಯನ್ನು ಹೊಂದಿರುತ್ತದೆ.

ಜೀವವೈವಿಧ್ಯವು ಹಲವು ಶಾಖೆಗಳನ್ನು ಹೊಂದಿರುವ ವಿಜ್ಞಾನ ಜೀವವೈವಿಧ್ಯದ ಮೇಲೆ ಹಕ್ಕನ್ನು ಹೊಂದಿರುವವರಲ್ಲಿ ಕೈಗಾರಿಕೆ, ಸ್ಥಳೀಯ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರ ಸೇರಿರುತ್ತದೆ.

ಜೀವವೈವಿಧ್ಯ ಒಡಂಬಡಿಕೆ ಮತ್ತು ಜೈವಿಕ ಅಧಿನಿಯಮ 2002ರ ಪರಿಭಾಷೆಯಲ್ಲಿ ಜೀವವೈವಿಧ್ಯವೆಂದರೆ ಎಲ್ಲಾ ಮೂಲಗಳ ಮತ್ತು ಅವುಗಳ ಭಾಗವಾಗಿರುವ ಜೀವಿ ಪರಿಸ್ಥಿತಿ ಸಂಕೀರ್ಣಗಳಿಂದ ಉಂಟಾಗುವ ಸಜೀವಿಗಳೊಳಗಿನ ವೈವಿಧ್ಯ ಮತ್ತು ಅದು ಪ್ರಭೇಧಗಳೊಳಗಿನ ಅಥವಾ ಪ್ರಭೇಧಗಳ ನಡುವಿನ ಮತ್ತು ಪರಿಸರ ವ್ಯವಸ್ಥೆಗಳಲ್ಲಿನ ವೈವಿಧ್ಯವನ್ನು ಒಳಗೊಳ್ಳುತ್ತದೆ. ವಿಶಾಲವಾದ ಅರ್ಥದಲ್ಲಿ ಭೂಮಿಯ ಸಮಸ್ತ ಜೀವ ರಾಶಿಯನ್ನೊಳಗೊಂಡಿರುತ್ತದೆ.

(ಎ) "ಜೈವಿಕವೈವಿಧ್ಯ" ಎಂದರೆ, ಎಲ್ಲಾ ಮೂಲಗಳ ಮತ್ತು ಅವುಗಳ ಭಾಗವಾಗಿರುವ ಜೀವಿ ಪರಿಸ್ಥಿತಿ ಸಂಕೀರ್ಣಗಳಲ್ಲಿರುವ ಉಂಟಾಗುವ ಸಜೀವಿಗಳೊಳಗಿನ ವೈವಿಧ್ಯತೆ ಮತ್ತು ಅದು ಪ್ರಭೇದಗಳೊಳಗಿನ ಅಥವಾ ಪ್ರಭೇದಗಳ ನಡುವಿನ ಮತ್ತು ಪರಿಸರ ವ್ಯವಸ್ಥೆಗಳಲ್ಲಿನ ವೈವಿಧ್ಯವನ್ನು ಒಳಗೊಳ್ಳುತ್ತದೆ.

(ಬಿ) "ಜೈವಿಕ ಸಂಪನ್ಮೂಲಗಳು" ಎಂದರೆ, ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಾಣು ಜೀವಿಗಳು ಅಥವಾ ಅದರ ಭಾಗಗಳು, ವಾಸ್ತವಿಕ ಅಥವಾ ಸಮರ್ಥ ಉಪಯೋಗ ಅಥವಾ ಮೌಲ್ಯವುಳ್ಳ ಅವುಗಳ ವಂಶವಾಹಿ ವಸ್ತುಗಳು ಮತ್ತು ಉಪ ಉತ್ಪನ್ನಗಳು (ಮೌಲ್ಯವರ್ಧಿತ ಉತ್ಪನ್ನಗಳು ಹೊರತುಪಡಿಸಿ) ಆದರೆ ಮಾನವ ವಂಶವಾಹಿ ವಸ್ತುಗಳನ್ನು ಒಳಗೊಳ್ಳುವುದಿಲ್ಲ.

(ಸಿ) "ವಾಣಿಜ್ಯ ಬಳಕೆ" ಎಂದರೆ,ಔಷಧ,ಕೈಗಾರಿಕಾ ಕಿಣ್ವ,ಆಹಾರ ಸುವಾಸನೆ, ಪರಿಮಳ, ಪ್ರಸಾಧನ, ಎಮಲ್ಸಿಫೈಯರ್ (ಸೌಂದರ್ಯವರ್ಧಕ),ಒಲಿಯೋ ರೆಸಿನ್ಸ್, ಬಣ್ಣಗಳು, ಬೆಳೆಗಳು ಮತ್ತು ಜಾನುವಾರುಗಳ ಸುಧಾರಿಸುವುದಕ್ಕಾಗಿ ವಂಶವಾಹಿನಿಗಳಲ್ಲಿ ವ್ಯತ್ಯಾಸವುಂಟು ಮಾಡಲು ಬಳಸುವ ವಂಶವಾಹಿಗಳಂತಹ ವಾಣಿಜ್ಯ ಉಪಯೋಗಕ್ಕಾಗಿ ಬಳಸುವ ಜೈವಿಕ ಸಂಪನ್ಮೂಲಗಳ, ಬಳಕೆಗಳು, ಆದರೆ ಇದು ಕೃಷಿ, ತೋಟಗಾರಿಕೆ, ಕೋಳಿ ಸಾಕಣೆ,ಹೈನುಗಾರಿಕೆ, ಪಶು ಸಂಗೋಪನೆ,ಅಥವಾ ಜೇನು ಸಾಕಣೆಯಲ್ಲಿ ಆಚರಣೆಯಲ್ಲಿರುವ ಸಾಂಪ್ರದಾಯಿಕ ತಳಿ ಅಭಿವೃದ್ಧಿ ಅಥವಾ ರೂಢಿಗತಪದ್ಧತಿಗಳನ್ನು ಒಳಗೊಳ್ಳುವುದಿಲ್ಲ.

(ಡಿ) "ಸುಸ್ಥಿರ ಬಳಕೆ" ಎಂದರೆ, ಜೈವಿಕವೈವಿಧ್ಯದ ದೀರ್ಘಕಾಲಿಕ ಅವನತಿಗೆ ಆಸ್ಪದ ನೀಡದಂತಹ ರೀತಿಯಲ್ಲಿ ಮತ್ತು ಅಂತಹ ಪ್ರಮಾಣದಲ್ಲಿ ಜೈವಿಕವೈವಿಧ್ಯದ ಘಟಕಾಂಶ ಗಳನ್ನು ಬಳಸುವ ಮೂಲಕ ಈಗಿನ ಮತ್ತು ಮುಂದಿನ ಜನಾಂಗ ಗಳ ಅಗತ್ಯತೆ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಅದರ ಸಾಮರ್ಥ್ಯತೆಯನ್ನು ಕಾಪಾಡುವುದು.

(ಇ) “ಮೌಲ್ಯ ವರ್ಧಿತ ಉತ್ಪನ್ನಗಳು” ಎಂದರೆ,ಗುರುತು ಹಿಡಿಯಲಾಗದಂತೆ ಮತ್ತು ವಾಸ್ತವಿಕವಾಗಿ ಬೇರ್ಪಡಿಸಲಾಗದಂತೆ ಸಸ್ಯಗಳು ಮತ್ತು ಪ್ರಾಣಿಗಳ ಭಾಗ ಅಥವಾ ಸಾರವನ್ನು ಒಳಗೊಂಡಿರುವ ಉತ್ಪನ್ನಗಳು.

(ಎಫ್) ಕೆಲವು ಉದ್ದೇಶಗಳಿಗಾಗಿ ಜೈವಿಕ ಸಂಪನ್ಮೂಲಗಳ ನ್ನು ಪಡೆಯುವುದಕ್ಕಾಗಿ ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಮುಂಚಿತವಾಗಿ ತಿಳಿಸುವುದು:-

ಭಾರತದ ಒಬ್ಬ ಪ್ರಜೆಯಾಗಿರುವ ಯಾರೇ ವ್ಯಕ್ತಿ ಅಥವಾ ಭಾರತದಲ್ಲಿ ನೋಂದಾಯಿಸಿಕೊಂಡಿರುವ ಒಂದು ನಿಗಮಿತ ನಿಕಾಯ, ಸಂಘ ಅಥವಾ ಸಂಸ್ಥೆಯು ವಾಣಿಜ್ಯ ಬಳಕೆಗಾಗಿ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಪೂರ್ವ ತಿಳುವಳಿಕೆಯನ್ನು ನೀಡಿದ ಹೊರತು ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯತಕ್ಕದ್ದಲ್ಲ.

ಪರಂತು, ಈ ಪ್ರಕರಣದ ಉಪಬಂಧಗಳು ಜೈವಿಕ ವೈವಿಧ್ಯ ಬೆಳೆಗಾರರು ಮತ್ತು ಕೃಷಿಕರು ಸೇರಿದಂತೆ ಸ್ಥಳೀಯ ಜನರಿಗೆ ಮತ್ತು ಆ ಪ್ರದೇಶದ ಸಮುದಾಯ ಗಳಿಗೆ ಮತ್ತು ದೇಶೀಯ ವೈದ್ಯ ಪದ್ಧತಿಯನ್ನು ನಡೆಸುವ ವೈದ್ಯರು ಮತ್ತು ಹಕೀಮರಿಗೆ ಅನ್ವಯವಾಗತಕ್ಕದ್ದಲ್ಲ.

(ಜಿ) ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಪ್ರಕಾರ್ಯಗಳು:

ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಪ್ರಕಾರ್ಯಗಳು ಈ ಕೆಳಕಂಡಂತಿರುತ್ತವೆ:-

(ಹೆಚ್) ಜೈವಿಕವೈವಿಧ್ಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬರುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆ ಇವುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರಕಾರವು ಹೊರಡಿಸಿದ ಯಾವುವೇ ಮಾರ್ಗದರ್ಶನ ಸೂತ್ರಗಳಿಗೆ ಒಳಪಟ್ಟು, ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

(ಐ) ಯಾವುದೇ ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ಅಥವಾ ಮಾಡಿಕೊಂಡ ಇತರ ರೀತಿಯ ಕೋರಿಕೆಗಳನ್ನು ಮಂಜೂರು ಮಾಡುವ ಮೂಲಕ ವಿನಿಯಮಿಸುವುದು.

(ಜೆ) ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಅಗತ್ಯವಾಗಬಹುದಾಂಥ ಅಥವಾ ರಾಜ್ಯ ಸರಕಾರವು ನಿಯಮಿಸಬಹುದಾದಂಥ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

(ಕೆ) ಕೆಲವು ಚಟುವಟಿಕೆಗಳನ್ನು ನಿರ್ಬಂಧಿಸಲು ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಅಧಿಕಾರ:-

(ಎಲ್) 7ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಚಟುವಟಿಕೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸುವ ಭಾರತದ ಯಾರೇ ನಾಗರಿಕ ಅಥವಾ ನಿಗಮಿತ ನಿಕಾಯ, ಭಾರತದಲ್ಲಿ ನೋಂದಣಿ ಮಾಡಿಸಿರುವ ಸಂಘ ಅಥವಾ ಸಂಸ್ಥೆಯು, ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ರಾಜ್ಯ ಸರಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಪೂರ್ವ ಸೂಚನೆ ನೀಡತಕ್ಕದ್ದು.

(ಎಮ್)1ನೇ ಉಪ ಪ್ರಕರಣದ ಅಡಿಯಲ್ಲಿ ಸೂಚನೆಯನ್ನು ಸ್ವೀಕರಿಸಿದ ತರುವಾಯ ರಾಜ್ಯ ಜೈವಿಕವೈವಿಧ್ಯ ಮಂಡಳಿಯು,ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೊಡನೆ ಸಮಾಲೋಚಿಸಿದ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಅದು ಯುಕ್ತವೆನಿಸ ಬಹುದಾದಂಥ ರೀತಿಯಲ್ಲಿ ಅಂಥ ವಿಚಾರಣೆಗಳನ್ನು ನಡೆಸಿದ ನಂತರ, ಅದು, ಅಂಥ ಕಾರ್ಯ ಚಟುವಟಿಕೆಗಳು, ಜೈವಿಕವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಮತ್ತು ಅಂಥ ಚಟುವಟಿಕೆಗಳಿಂದ ಪ್ರಾಪ್ತವಾಗುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆಯ ಉದ್ದೇಶಗಳಿಗೆ ಬಾಧಕವಾಗಿವೆ ಅಥವಾ ವ್ಯತಿರಿಕ್ತವಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ ಅಂಥ ಯಾವುದೇ ಕಾರ್ಯ ಚಟುವಟಿಕೆಯನ್ನು, ಆದೇಶದ ಮೂಲಕ ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು.

ಪರಂತು,ಬಾಧಿತ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(ಎನ್) ಪೂರ್ವಸೂಚನೆಗಾಗಿ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನಮೂನೆಯಲ್ಲಿ ನೀಡಲಾದ ಯಾವುದೇ ಮಾಹಿತಿಯನ್ನು ಗೌಪ್ಯವಾಗಿಡತಕ್ಕದ್ದು ಮತ್ತು ಅದಕ್ಕೆ ಸಂಬಂಧಪಡದ ಯಾರೇ ವ್ಯಕ್ತಿಗೆ ಉದ್ದೇಶ ಪೂರ್ವಕವಾಗಿ ಯಾಗಲಿ ಅಥವಾ ಉದ್ದೇಶರಹಿತವಾಗಿಯಾಗಲಿ ಬಹಿರಂಗ ಪಡಿಸತಕ್ಕದ್ದಲ್ಲ.

(೬). ಜೈವಿಕವೈವಿಧ್ಯದ ಪರಂಪರಾಗತ ತಾಣಗಳು:-

(೧) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಬಾಧಕವಾಗದಂತೆ ರಾಜ್ಯ ಸರಕಾರವು, ಕಾಲದಿಂದ ಕಾಲಕ್ಕೆ ಸ್ಥಳೀಯ ನಿಕಾಯಗಳೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಅಡಿಯಲ್ಲಿ ಜೈವಿಕವೈವಿಧ್ಯದ ಪ್ರಾಮುಖ್ಯತೆ ಹೊಂದಿರುವ ಪ್ರದೇಶಗಳನ್ನು ಜೈವಿಕವೈವಿಧ್ಯದ ಪರಂಪರಾಗತ ತಾಣಗಳೆಂದು ರಾಜ್ಯ ಪತ್ರದಲ್ಲಿ ಅಧಿಸೂಚಿಸಬಹುದು.

(೨) ರಾಜ್ಯ ಸರಕಾರವು, ಕೇಂದ್ರ ಸರಕಾರದೊಂದಿಗೆ ಸಮಾಲೋಚಿಸಿ, ಎಲ್ಲಾ ಪರಂಪರಾಗತ ತಾಣಗಳ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ನಿಯಮಗಳನ್ನು ರೂಪಿಬಹುದು.

(೩) ರಾಜ್ಯ ಸರಕಾರವು, ಅಂಥ ಅಧಿಸೂಚನೆಯಿಂದ ಆರ್ಥಿಕವಾಗಿ ಬಾಧಿತನಾದ ಯಾರೇ ವ್ಯಕ್ತಿ ಅಥವಾ ಸಮುದಾಯಗಳಿಗೆ ಪರಿಹಾರ ನೀಡುವ ಅಥವಾ ಪುನರ್ವಸತಿ ಕಲ್ಪಿಸುವ ಯೋಜನೆಗಳನ್ನು ರೂಪಿಸತಕ್ಕದ್ದು.

(೭) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ರಚನೆ:-

(೧) ಪ್ರತಿಯೊಂದು ಸ್ಥಳೀಯ ನಿಕಾಯವು ತನ್ನ ಪ್ರದೇಶದಲ್ಲಿ, ಆವಾಸಗಳ ಸಂರಕ್ಷಣೆ, ಭೂ ಸಂತತಿಗಳ ಸಂರಕ್ಷಣೆ, ನಾಟಿ ತಳಿ ಪ್ರಭೇದಗಳು ಮತ್ತು ಕೃಷಿ ತಳಿಗಳು, ಪಳಗಿಸಿದ ಪ್ರಾಣಿಗಳು ಅವುಗಳ ತಳಿಗಳು, ಹಾಗೂ ಸೂಕ್ಷ್ಮ ಜೀವಿಗಳು ಮತ್ತು ಜೈವಿಕವೈವಿಧ್ಯಕ್ಕೆ ಸಂಬಂಧಿಸಿದ ಅವುಗಳ ಕಾಲಾನುಕ್ರಮದ ಪರಿಚಯವು ಸೇರಿದಂತೆ ಜೈವಿಕವೈವಿಧ್ಯದ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ದಾಖಲಾತಿಯ ಉದ್ದೇಶಕ್ಕಾಗಿ ತನ್ನ ಪ್ರದೇಶದಲ್ಲಿ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸತಕ್ಕದ್ದು.

ವಿವರಣೆ:- ಈ ಉಪ ಪ್ರಕರಣದ ಉದ್ದೇಶಗಳಿಗಾಗಿ:-

ಎ) **'ಕೃಷಿ ತಳಿ'** ಎಂದರೆ ಕೃಷಿ ಉದ್ದೇಶಕ್ಕಾಗಿ ಬೇಸಾಯದ ಮೂಲಕ ಬೆಳೆದಿದ್ದು, ಉಳಿದುಕೊಂಡು ಬಂದ ಅಥವಾ ಬೇಸಾಯದ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ಅಭಿವೃದ್ಧಿಪಡಿಸಿದ ತಳಿಯ ಸಸ್ಯ ಪ್ರಭೇದ.

ಬಿ) **'ನಾಟಿ ತಳಿ ಪ್ರಭೇದ'** ಎಂದರೆ ರೈತರು ಅಭಿವೃದ್ಧಿಪಡಿಸಿದ, ಬೆಳೆಸಿದ ಮತ್ತು ಅವರ ನಡುವೆ ಅನೌಪಚಾರಿಕವಾಗಿ ವಿನಿಮಯ ಮಾಡಿಕೊಳ್ಳಲಾದ ಸಸ್ಯ ಪ್ರಭೇದ.

ಸಿ) **'ವನ್ಯ ತಳಿ'** ಎಂದರೆ ಪ್ರಾಚೀನ ಕಾಲದ ರೈತರು ಹಾಗೂ ಅವರ ಉತ್ತರಾಧಿಕಾರಿ ಗಳು ಬೆಳೆಯುತ್ತಿದ್ದ ಪುರಾತನಕಾಲದ ಕೃಷಿ ತಳಿ.

(೨) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಮತ್ತು ರಾಜ್ಯ ಜೈವಿಕವೈವಿಧ್ಯ ಮಂಡಳಿ ಗಳು, ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ಎಲ್ಲೆಯ ವ್ಯಾಪ್ತಿಯೊಳಗೆ ದೊರೆಯುವಂಥ ಜೈವಿಕ ಸಂಪನ್ಮೂಲಗಳ ಹಾಗೂ ಅಂಥ ಸಂಪನ್ಮೂಲಗಳಿಗೆ ಸಂಬಂಧಪಟ್ಟ ಯಾವುದೇ ಜ್ಞಾನದ

ಬಳಕೆಗೆ ಸಂಬಂಧಪಟ್ಟ ಯಾವುದೇ ನಿರ್ಣಯವನ್ನು ಕೈಗೊಳ್ಳುವಾಗ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳೊಂದಿಗೆ ಸಮಾಲೋಚಿಸತಕ್ಕದು.

(೩) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯು, ತನ್ನ ಕೇಂದ್ರಾಡಳಿತದ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ, ವಾಣಿಜ್ಯ ಉದ್ದೇಶಗಳಿಗಾಗಿ, ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯುವುದಕ್ಕಾಗಿ ಅಥವಾ ಸಂಗ್ರಹಿಸುವುದಕ್ಕಾಗಿ ಯಾರೇ ವ್ಯಕ್ತಿಯಿಂದ ಶುಲ್ಕರೂಪವಾಗಿ ವೆಚ್ಚಗಳನ್ನು ವಿಧಿಸಬಹುದು.

(ಕ್ಯೂ) ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಬಳಕೆ:-

(೧) (೨)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ಸ್ಥಳೀಯ ಜೈವಿಕವೈವಿಧ್ಯ ನಿಧಿಯ ವ್ಯವಸ್ಥಾಪನೆ ಮತ್ತು ಅಂಥ ನಿಧಿಯನ್ನು ಬಳಸತಕ್ಕ ಉದ್ದೇಶಗಳು ರಾಜ್ಯ ಸರಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕುದು.

(೨) ನಿಧಿಯನ್ನು,ಸಂಬಂಧಪಟ್ಟ ಸ್ಥಳೀಯ ನಿಕಾಯದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ ಜೈವಿಕವೈವಿಧ್ಯದ ಸಂರಕ್ಷಣೆ ಮತ್ತು ವೃದ್ಧಿಗೆ ಬಳಸತಕ್ಕುದು ಮತ್ತು ಅಂಥ ಬಳಕೆಯು ಜೈವಿಕವೈವಿಧ್ಯದ ಸಂರಕ್ಷಣೆಗೆ ಸುಸಂಗತವಾಗುವಷ್ಟರ ಮಟ್ಟಿಗೆ ಸಮುದಾಯದ ಪ್ರಯೋಜನಕ್ಕಾಗಿ ನಿಧಿಯನ್ನು ಬಳಸತಕ್ಕುದು.

(ಆರ್) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳ ವಾರ್ಷಿಕ ವರದಿ:-

ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಅಭಿರಕ್ಷೆ ಹೊಂದಿರುವ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ವಿವರವನ್ನು ನೀಡುವತನ್ನ ವಾರ್ಷಿಕ ವರದಿಯನ್ನು ಪ್ರತಿ ಹಣಕಾಸು ವರ್ಷದ ಸಮಯದಲ್ಲಿ ಸಿದ್ಧಗೊಳಿಸತಕ್ಕುದು ಮತ್ತು ಅದರ ಒಂದು ಪ್ರತಿಯನ್ನು ಸ್ಥಳೀಯ ಸಭೆಗೆ ಒಪ್ಪಿಸತಕ್ಕದ್ದು.

(ಎಸ್) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳ ಲೆಕ್ಕ ಪರಿಶೋಧನೆ:-

ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಲೆಕ್ಕಗಳನ್ನು, ರಾಜ್ಯದ ಮಹಾಲೇಖಪಾಲರೊಂದಿಗೆ ಸಮಾಲೋಚಿಸಿ,ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಪರಿಶೋಧನೆ ಮಾಡತಕ್ಕುದು ಮತ್ತು ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಅಭಿರಕ್ಷೆ ಹೊಂದಿರುವ ವ್ಯಕ್ತಿಯು, ಅದರ ಲೆಕ್ಕಗಳನ್ನು ಪರಿಶೋಧನೆಯ ಪ್ರತಿಯನ್ನು ಅದರ ಮೇಲೆ ಮಾಡಿದ ಲೆಕ್ಕ ಪರಿಶೋಧನ ವರದಿಯ ಜೊತೆಯಲ್ಲಿ ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು, ಸಂಬಂಧ ಪಟ್ಟ ಸ್ಥಳೀಯ ನಿಕಾಯಕ್ಕೆ ಒದಗಿಸತಕ್ಕುದ್ದು.

(ಟಿ) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ವಾರ್ಷಿಕ ವರದಿ ಮುಂತಾದವುಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸುವುದು:-

41ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯನ್ನು ಸ್ಥಾಪನೆ ಮಾಡಿರುವ ಪ್ರತಿಯೊಂದು ಸ್ಥಳೀಯ ನಿಕಾಯವು, ಅನುಕ್ರಮವಾಗಿ 45 ಮತ್ತು 46ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಪರಿಶೋಧನೆ ಮಾಡಲಾದ ಲೆಕ್ಕಗಳ ಪ್ರತಿಯನ್ನು ಮತ್ತು ಅಂಥ ಸಮಿತಿಗೆ ಸಂಬಂಧಿಸಿದಂತೆ ಪರಿಶೋಧಕನು ಅದರಲ್ಲಿ ಮಾಡಿದ ವರದಿಯೊಂದಿಗೆ ಸ್ಥಳೀಯ ನಿಕಾಯದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಲು ಕಾರಣವಾಗತಕ್ಕದ್ದು.

(ಯು) ದಂಡನೆಗಳು:-

(1) 3ನೇ ಪ್ರಕರಣದ ಅಥವಾ ४ನೇ ಪ್ರಕರಣದ ಅಥವಾ 6ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಅಥವಾ ಉಲ್ಲಂಘಿಸಲು ದುಷ್ಪ್ರೇರಿಸಿದ, ಯಾರೇ ವ್ಯಕ್ತಿ ಐದು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾಗೃಹ ವಾಸದ ಶಿಕ್ಷೆಯೊಂದಿಗೆ ಹತ್ತು ಲಕ್ಷ ರೂಪಾಯಿಗ ಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನಾರ್ಹ ನಾಗತಕ್ಕುದು ಮತ್ತು ಉಂಟು ಮಾಡಿದ ಹಾನಿಯು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ್ದರೆ, ಹಾನಿಗೆ ತಕ್ಕ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡನೀಯ ನಾಗತಕ್ಕದ್ದು.

(2) 7ನೇ ಪ್ರಕರಣದ ಉಪಬಂಧಗಳನ್ನು ಅಥವಾ 24ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿದ ಅಥವಾ ಉಲ್ಲಂಘಿಸುವುದಕ್ಕೆ ಪ್ರಯತ್ನಿಸಿದ ಅಥವಾ ಉಲ್ಲಂಘಿಸಲು ದುಷ್ಪ್ರೇರಿಸಿದ ಯಾರೇ ವ್ಯಕ್ತಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸದಿಂದ ಅಥವಾ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡನೀಯನಾಗತಕ್ಕದ್ದು.

## ನಮೂನೆ - I

(ನಿಯಮ 14ನ್ನು ನೋಡಿ)

1. ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಹೊಂದುವ ಅವಕಾಶ ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ.

ಭಾಗ - ಎ

(i) ಅರ್ಜಿದಾರನ ಪೂರ್ಣ ವಿವರಗಳು

(ii) ಹೆಸರು

(iii) ಖಾಯಂ ವಿಳಾಸ

(iv) ಭಾರತದಲ್ಲಿ ಸಂಪರ್ಕಿಸಬಹುದಾದ ವ್ಯಕ್ತಿ/ ಏಜೆಂಟ್ ಯಾರಾದರೂ ಇದ್ದರೆ ಅವರ

(v) ಸಂಸ್ಥೆಯ ರೂಪುರೇಷೆ (ಅರ್ಜಿದಾರನು ವ್ಯಕ್ತಿಯಾಗಿದ್ದಲ್ಲಿ ವೈಯಕ್ತಿಕ ಪರಿಚಯ)
ದಯವಿಟ್ಟು ಅಧಿಪ್ರಮಾಣಿತ ಸೂಕ್ತ ದಾಖಲೆಗಳನ್ನು ಲಗತ್ತಿಸಿ.

(vi) ವ್ಯವಹಾರದ ಸ್ವರೂಪ

(vii) ಅಮೆರಿಕ ಸಂ.ಸ.ದ ಡಾಲರ್‌ನಲ್ಲಿ ಸಂಸ್ಥೆಯ ವಹಿವಾಟು

2. ಕೋರಿರುವ ಹೊಂದುವ ಅವಕಾಶದ ಮತ್ತು ಹೊಂದುವ ಅವಕಾಶ ಪಡೆಯುವಂಥ ಜೈವಿಕ ವಸ್ತುವಿನ ಮತ್ತು ಅದರ ಬಗೆಗಿನ ಜ್ಞಾನದ ಬಗ್ಗೆ ವಿವರಗಳು ಮತ್ತು ನಿರ್ದಿಷ್ಟ ಮಾಹಿತಿ

ಎ) ಜೈವಿಕ ಸಂಪನ್ಮೂಲಗಳ ಗುರುತು(ವೈಜ್ಞಾನಿಕ ಹೆಸರು),ಮತ್ತು ಅದರ ಸಾಂಪ್ರದಾಯಿಕ ಬಳಕೆ;

ಬಿ) ಉದ್ದೇಶಿತ ಸಂಗ್ರಹಣೆಯ ಭೌಗೋಳಿಕ ಸ್ಥಳ;

ಸಿ) ಸಾಂಪ್ರದಾಯಿಕ ಜ್ಞಾನದ (ಮೌಖಿಕ/ದಸ್ತಾವೇಜಿಯ) ವಿವರಣೆ/ಸ್ವರೂಪ;

ಡಿ) ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವ ಯಾರೇ ಗುರುತಿಸಲಾದ

ಇ) ಸಂಗ್ರಹಿಸಬೇಕಾದ ಜೈವಿಕ ಸಂಪನ್ಮೂಲಗಳ ಪ್ರಮಾಣ (ಅನುಸೂಚಿಯನ್ನು ನೀಡಿ)

ಎಫ್) ಯಾವ ಸಮಯದಲ್ಲಿ ಜೈವಿಕ ಸಂಪನ್ಮೂಲವನ್ನು ಸಂಗ್ರಹಿ ಸುವುದಕ್ಕೆ ಪ್ರಸ್ತಾವಿಸಲಾಗಿದೆಯೋ ಅಂಥ ಸಮಯಾವಧಿ;

ಜಿ) ಆಯ್ಕೆಯನ್ನು ಮಾಡುವುದಕ್ಕೆ ಕಂಪನಿಯು ಅಧಿಕಾರ ನೀಡಿರುವ ವ್ಯಕ್ತಿ ಯರು ಮತ್ತು ಸಂಖ್ಯೆ;

ಹೆಚ್) ಸಂಶೋಧನೆಯ ಬಗೆ ಮತ್ತು ವ್ಯಾಪ್ತಿ, ಅದರಿಂದ ಪಡೆಯಲಾ ಗುತ್ತಿರುವ ಮತ್ತು ಪಡೆಯುವ ನಿರೀಕ್ಷೆಯಿರುವ ವಾಣಿಜ್ಯ ಬಳಕೆ ಸೇರಿದಂತೆ ಯಾವ ಉದ್ದೇಶಕ್ಕಾಗಿ ಹೊಂದುವ ಅವಕಾಶವನ್ನು ಕೋರಲಾಗಿದೆಯೋ ಆ ಉದ್ದೇಶ;

(ಐ) ಯಾವುದೇ ಸಂಪನ್ಮೂಲಗಳ ಸಂಗ್ರಹಣೆಯಿಂದ ಜೈವಿಕವೈವಿಧ್ಯದ ಯಾವುದೇ ಘಟಕಾಂಶಕ್ಕೆ ಅಪಾಯವುಂಟಾಗುತ್ತದೆಯೇ ಮತ್ತು ಸಂಪನ್ಮೂಲಗಳನ್ನು ಹೊಂದುವ ಅವಕಾಶದಿಂದ ಯಾವುದೇ ತೊಂದರೆ ಉದ್ಭವಿಸುವುದೇ

3. ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂಥ ಯಾವುದೇ ರಾಷ್ಟ್ರೀಯ ಸಂಸ್ಥೆಯ ವಿವರಗಳು.

4. ಹೊಂದುವ ಅವಕಾಶ ಪಡೆದ ಸಂಪನ್ಮೂಲಗಳ ಪ್ರಾಥಮಿಕ ಗಮ್ಯ ಸ್ಥಾನ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ನಿರ್ವಹಿಸುವಂಥ ಸ್ಥಳದ ಗುರುತು.

5. ಅರ್ಜಿದಾರನಿಗೆ ಅಥವಾ ಆತ/ಆಕೆ ಸೇರಿದ ದೇಶಕ್ಕೆ ಬೌದ್ಧಿಕ ಆಸ್ತಿ ಹಕ್ಕಿನಿಂದ, ಉದ್ದೇಶಿತ ಅಥವಾ ಪ್ರಾಪ್ತವಾಗ ಬಹುದಾದ, ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಜ್ಞಾನದಿಂದ ಪಡೆದ ಪೇಟೆಂಟ್ ನಿಂದ ದೊರೆಯುವ ಲಾಭ ಗಳು ಸೇರಿದಂತೆ, ಆರ್ಥಿಕ ಮತ್ತು ಇತರೆ ಲಾಭಗಳು.

6. ಅರ್ಜಿದಾರನಿಗೆ ಅಥವಾ ಆತ / ಆಕೆ ಸೇರಿರುವಂಥ ದೇಶಕ್ಕೆ ಉದ್ದೇಶಿತ ಅಥವಾ ಪ್ರಾಪ್ತವಾಗಬಹುದಾದ ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಜ್ಞಾನದಿಂದ ದೊರೆತ ಜೈವಿಕ ತಂತ್ರಜ್ಞಾನ, ವೈಜ್ಞಾನಿಕ, ಸಾಮಾಜಿಕ ಅಥವಾ ಯಾವುದೇ ಇತರ ಪ್ರಯೋಜನಗಳು.

7. ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಸಾಂಪ್ರದಾಯಿಕ ಜ್ಞಾನದ ಬಳಕೆಯಿಂದ ಭಾರತ / ಸಮುದಾಯಗಳಿಗೆ ದೊರೆಯುವ ಸೌಲಭ್ಯಗಳ ಅಂದಾಜು.

8. ಲಾಭವನ್ನು ಹಂಚಿಕೊಳ್ಳುವ ಪ್ರಸ್ತಾವಿತ ವ್ಯವಸ್ಥೆ ಮತ್ತು ಏರ್ಪಾಡುಗಳು.

9. ಸೂಕ್ತವೆಂದು ಪರಿಗಣಿಸಿದ ಯಾವುದೇ ಇತರ ಮಾಹಿತಿ.

**ಭಾಗ - ಬಿ : ಘೋಷಣೆ**

ನಾನು/ನಾವು

- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಸಂಪನ್ಮೂಲಗಳ ಸುಸ್ಥಿರತೆಗೆ ಪ್ರತೀಕೂಲ ಪರಿಣಾಮ ಉಂಟಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಯಾವುದೇ ಪರಿಸರ ಪರಿಣಾಮ ಉಂಟಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಜೀವಿ ವ್ಯವಸ್ಥೆಗೆ ಯಾವುದೇ ತೊಂದರೆ ಎದುರಾಗ ುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಸ್ಥಳೀಯ ಸಮುದಾಯಗಳ ಮೇಲೆ ಪ್ರತೀಕೂಲವಾಗಿ ಪರಿಣಾಮ ಉಂಟಾಗುವುದಿಲ್ಲ;

ಎಂದು ಈ ಮೂಲಕ ಘೋಷಿಸುತ್ತೇನೆ/ವೆ.

ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ನಾನು / ನಾವು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು ಮತ್ತು ದೋಷ ಪೂರ್ಣ ಮಾಹಿತಿಗೆ ನಾನು/ವು ಜವಾಬ್ದಾರಿಯಾಗಿರುತ್ತೇನೆ/ವೆ.

ಸಹಿ

ಸ್ಥಳ: ಹೆಸರು

ದಿನಾಂಕ: ಪದನಾಮ

**ನಮೂನೆ-II**

**(ನಿಯಮ 17ನ್ನು ನೋಡಿ)**

ವಾಣಿಜ್ಯ ಉದ್ದೇಶಗಳಿಗಾಗಿ ವಿದೇಶೀ ವ್ಯಕ್ತಿಗಳಿಗೆ,ಕಂಪನಿಗಳಿಗೆ, ಅನಿವಾಸಿ ಭಾರತೀಯರಿಗೆ, ಸಂಶೋಧನೆಯ ಫಲಿತಾಂಶಗಳನ್ನು ವರ್ಗಾಯಿಸುವುದಕ್ಕಾಗಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆ ಕೋರುವುದಕ್ಕೆ ಸಂಬಂಧಿಸಿದಂಥ ಅರ್ಜಿ.

1. ಅರ್ಜಿದಾರನ ಪೂರ್ಣ ವಿವರಗಳು:

    i) ಹೆಸರು

    ii) ವಿಳಾಸ

    iii) ವೃತ್ತಿಯ ರೂಪುರೇಷೆ

iv) ಸಂಸ್ಥೆಯ ಸಂಯೋಜನೆ(ದಯವಿಟ್ಟು ಅಧಿ ಪ್ರಮಾಣಿತ ಸೂಕ್ತ ದಸ್ತಾವೇಜುಗಳನ್ನು ಲಗತ್ತಿಸಿ)

2. ನಡೆಸಲಾದ ಸಂಶೋದನೆಯ ಫಲಿತಾಂಶಗಳ ವಿವರಗಳು.
3. ಸಂಶೋಧನೆಯಲ್ಲಿ ಬಳಸಲಾದ ಜೈವಿಕ ಸಂಪನ್ಮೂಲಗಳ ಮತ್ತು /ಅಥವಾ ಅವುಗಳ ಬಗೆಗಿನ ಜ್ಞಾನದ ವಿವರಗಳು.
4. ಸಂಶೋಧನೆಯಲ್ಲಿ ಬಳಸಲಾದ ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಿಸಲಾದಂಥ ಭೌಗೋಳಿಕ ಪ್ರದೇಶ.
5. ಸಂಶೋಧನೆಯಲ್ಲಿ ಬಳಸಲಾದ ಯಾವುದೇ ಸಾಂಪ್ರದಾಯಿಕ ಜ್ಞಾನದ ವಿವರಗಳು ಮತ್ತು ಸಾಂಪ್ರದಾಯಿಕ ಜ್ಞಾನವನ್ನೊಂದಿರುವ ಯಾರೇ ಗುರುತಿಸಲ್ಪಟ್ಟ ವ್ಯಕ್ತಿ/ಸಮುದಾಯ.
6. ಸಂಶೋಧನೆಯಲ್ಲಿ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸಲಾ ಗುತ್ತಿರುವ ಸಂಸ್ಥೆಯ ವಿವರಗಳು.
7. ಸಂಶೋಧನೆಯ ಫಲಿತಾಂಶಗಳನ್ನು ಯಾರಿಗೆ ವರ್ಗಾವಣೆ ಮಾಡುವುದಕ್ಕೆ ಉದ್ದೇಶಿಸಲಾಗಿದೆಯೋ ಅಂಥ ವ್ಯಕ್ತಿ/ಸಂಸ್ಥೆಯ ವಿವರಗಳು.
8. ವರ್ಗಾಯಿಸಿದ ಸಂಶೋಧನಾ ಫಲಿತಾಂಶಗಳ ವಾಣಿಜ್ಯೀಕರಣದಿಂದಾಗಿ ವ್ಯಕ್ತಿ/ಸಂಸ್ಥೆಗೆ ಪ್ರಾಪ್ತವಾಗುತ್ತದೆಂದು ಉದ್ದೇಶಿಸಲಾದ ಅಥವಾ ಪ್ರಾಪ್ತವಾಗ ಬಹುದಾದ ಆರ್ಥಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.
9. ಸಂಶೋಧನೆಯ ಫಲಿತಾಂಶಗಳ ವರ್ಗಾವಣೆಗೆ ಅನುಮೋದನೆಯನ್ನು ಕೋರುವ ಅರ್ಜಿದಾರನಿಗೆ ಪ್ರಾಪ್ತವಾಗುತ್ತದೆಂದು ಉದ್ದೇಶಿಸಲಾದ ಅಥವಾ ಪ್ರಾಪ್ತವಾಗ ಬಹುದಾದ ಆರ್ಥಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.
10. ಸಂಶೋಧನೆಯ ಫಲಿತಾಂಶಗಳ ವರ್ಗಾವಣೆಗೆ ಅನುಮೋದನೆ ಕೋರುವ ಉದ್ದೇಶಿತ ಸ್ವೀಕರ್ತ ಮತ್ತು ಅರ್ಜಿದಾರನ ನಡುವೆ ಆಗಿರುವ ಯಾವುದೇ ಒಪ್ಪಂದ ಅಥವಾ ಒಡಂಬಡಿಕೆಯ ವಿವರಗಳು.

## ಘೋಷಣೆ

ಅರ್ಜಿ ನಮೂನೆಯಲ್ಲಿ ನೀಡಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ನಾನು/ನಾವು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು/ದೋಷಪೂರ್ಣ ಮಾಹಿತಿಗೆ ನಾನು/ನಾವು ಜವಾಬ್ದಾರರಾಗಿ ರುತ್ತೇನೆ/ವೆ.

ಸಹಿ

ಸ್ಥಳ: ಹೆಸರು

ದಿನಾಂಕ: ಪದನಾಮ

**ನಮೂನೆ- III**

**(18ನೇ ನಿಯಮವನ್ನು ನೋಡಿ)**

ಬೌದ್ಧಿಕ ಆಸ್ತಿಯ ಹಕ್ಕಿಗೆ ಅರ್ಜಿ ಸಲ್ಲಿಸಲು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪೂರ್ವ ಅನುಮೋದನೆ ಕೋರುವುದಕ್ಕಾಗಿ ಅರ್ಜಿ.

1. ಅರ್ಜಿದಾರನ ಸಂಪೂರ್ಣ ವಿವರಗಳು
   - i) ಹೆಸರು
   - ii) ವಿಳಾಸ
   - iii) ವೃತ್ತಿಯ ರೂಪುರೇಷೆ
   - iv) ಸಂಸ್ಥೆಯ ಸಂಯೋಜನೆ (ದಯವಿಟ್ಟು ಅಧಿ ಪ್ರಮಾಣೀಕರಿಸಿರುವ ಸುಸಂಗತ ದಸ್ತಾವೇಜುಗಳನ್ನು ಲಗತ್ತಿಸಿ)
2. ಬೌದ್ಧಿಕ ಆಸ್ತಿ ಹಕ್ಕನ್ನು ಯಾವುದರ ಮೇಲೆ ಕೋರಲಾಗಿದೆಯೋ ಆ ಸಂಶೋಧನೆಯ ವಿವರಗಳು.
3. ಸಂಶೋಧನೆಯಲ್ಲಿ ಬಳಸಿದ ಜೈವಿಕ ಸಂಪನ್ಮೂಲಗಳು ಮತ್ತು/ಅಥವಾ ಅವುಗಳ ಬಗೆಗಿನ ಜ್ಞಾನದ ವಿವರಗಳು.
4. ಸಂಶೋಧನೆಯಲ್ಲಿ ಬಳಸಿದ ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಿಸಲಾದ ಭೌಗೋಳಿಕಸ್ಥಳ.
5. ಸಂಶೋಧನೆಯಲ್ಲಿ ಬಳಸಲಾದ ಯಾವುದೇ ಸಾಂಪ್ರಾದಾಯಿಕ ಜ್ಞಾನದ ಮತ್ತು ಅಂಥ ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವರೆಂದು ಗುರುತಿ ಸಲಾದ ಯಾರೇ ವ್ಯಕ್ತಿಯ / ಸಮುದಾಯದ ವಿವರಗಳು.
6. ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಿದ ಸಂಸ್ಥೆಯ ವಿವರಗಳು.
7. ಸಂಶೋಧನೆಯ ವಾಣಿಜ್ಯೀಕರಣದಿಂದ ಅರ್ಜಿದಾರನಿಗೆ ಪ್ರಾಪ್ತವಾಗುವುದಾಗಿಉದ್ದೇಶಿಸಲಾದ ಅಥವಾ ಪ್ರಾಪ್ತವಾಗಬಹುದಾದ ಆರ್ಥಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.

**ಘೋಷಣೆ**

ನಾನು/ನಾವು ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿ ದೆ ಎಂದು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು/ ದೋಷಪೂರ್ಣ ಮಾಹಿತಿಗೆ ನಾನು/ನಾವು ಜವಾಬ್ದಾರರಾಗಿರುತ್ತೇನೆ/ವೆ.

ಸಹಿ

ಸ್ಥಳ: ಹೆಸರು

ದಿನಾಂಕ: ಪದನಾಮ

**ನಮೂನೆ -IV**

**(19ನೇ ನಿಯಮವನ್ನು ನೋಡಿ)**

ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಮೂರನೇ ಪಕ್ಷಕಾರನಿಗೆ ವರ್ಗಾಯಿಸಲು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆಯನ್ನು ಕೋರಲು ಸಲ್ಲಿಸಬೇಕಾದ ಅರ್ಜಿ ನಮೂನೆ.

1. ಅರ್ಜಿದಾರನ ಸಂಪೂರ್ಣ ವಿವರಗಳು
   - i) ಹೆಸರು
   - ii) ವಿಳಾಸ
   - iii) ವೃತ್ತಿಯ ರೂಪುರೇಷೆ
   - iv) ಸಂಸ್ಥೆಯ ಸಂಯೋಜನೆ (ದಯವಿಟ್ಟು ಅಧಿ ಪ್ರಮಾಣೀಕರಿಸಿರುವ ಸುಸಂಗತ ದಸ್ತಾವೇಜುಗಳನ್ನು ಲಗತ್ತಿಸಿ)
2. ಹೊಂದುವ ಅವಕಾಶ ಪಡೆದ ಜೈವಿಕ ವಸ್ತುಗಳ ಮತ್ತು ಸಾಂಪ್ರದಾಯಿಕ ಜ್ಞಾನದ ವಿವರಗಳು.
3. ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶದ ಬಗ್ಗೆ ಮಾಡಿಕೊಂಡ ಪ್ರವೇಶಾವಕಾಶ ಕರಾರಿನ ವಿವರಗಳು (ಪ್ರತಿಯನ್ನು ಲಗತ್ತಿಸಿ).
4. ಲಾಭಗಳ ಮತ್ತು ಈಗಾಗಲೇ ಅನುಷ್ಠಾನಗೊಳಿಸಿರುವ ಲಾಭದ ಹಂಚಿಕೆಯ ವ್ಯವಸ್ಥೆ / ಏರ್ಪಾಟುಗಳ ವಿವರಗಳು.
5. ಹೊಂದುವ ಅವಕಾಶ ಪಡೆದ ವಸ್ತುವನ್ನು/ ಜ್ಞಾನವನ್ನು ವರ್ಗಾವಣೆ ಮಾಡುವುದಕ್ಕೆ ಉದ್ದೇಶಿಸಲಾಗಿ ರುವ ಮೂರನೆ ಪಕ್ಷಕಾರನ ವಿವರಗಳು.
6. ಉದ್ದೇಶಿತ ಮೂರನೇ ಪಕ್ಷಕಾರನಿಗೆ ವರ್ಗಾವಣೆ ಮಾಡುವ ಉದ್ದೇಶ
7. ಹೊಂದುವ ಅವಕಾಶ ಪಡೆದ ಜೈವಿಕ ವಸ್ತುಗಳು ಅಥವಾ ಜ್ಞಾನದ ವರ್ಗಾ ವಣೆಯಿಂದ ಮೂರನೆ ಪಕ್ಷಕಾರನಿಗೆ ದೊರೆಯುವುದಾಗಿ ಉದ್ದೇಶಿಸಲಾದ ಅಥವಾ ದೊರೆಯಬಹುದಾದ ಆರ್ಥಿಕ, ಸಾಮಾಜಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.
8. ಅರ್ಜಿದಾರನ ಮತ್ತು ಮೂರನೆಯ ಪಕ್ಷಕಾರನ ನಡುವೆ ಆಗಿರುವ ಯಾವುದೇ ಒಪ್ಪಂದದ ವಿವರಗಳು.
9. ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲ ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಮೂರನೆಯ ಪಕ್ಷಕಾರನಿಗೆ ವರ್ಗಾವಣೆ ಮಾಡುವುದರಿಂದ ಭಾರತಕ್ಕೆ/ಸಮುದಾಯಕ್ಕೆ ದೊರೆಯುವ ಲಾಭಗಳ ಅಂದಾಜು.
10. ಪ್ರಸ್ತಾವಿತ ಮೂರನೇ ಪಕ್ಷಕಾರನಿಗೆ ವರ್ಗಾವಣೆ ಮಾಡುವುದರಿಂದ ದೊರೆಯುವ ಲಾಭದ ಹಂಚಿಕೆಗೆ ಪ್ರಸ್ತಾವಿಸಿರುವ ವ್ಯವಸ್ಥೆ ಮತ್ತು ಏರ್ಪಾಟುಗಳು.
11. ಯಾವುದೇ ಇತರ ಸುಸಂಬದ್ಧ ಮಾಹಿತಿ.

### ಘೋಷಣೆ

ನಾನು /ನಾವು ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು/ ದೋಷಪೂರ್ಣ ಮಾಹಿತಿಗೆ ನಾನು/ನಾವು ಹೊಣೆಯಾಗಿರುತ್ತೇನೆ/ವೆ.

ಸಹಿ

ಸ್ಥಳ: ಹೆಸರು

ದಿನಾಂಕ: ಪದನಾಮ

**ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ರಚನೆ:**

1) ಪ್ರತಿಯೊಂದು ಸ್ಥಳೀಯ ಸಂಸ್ಥೆಯು, ಅದರ ಕ್ಷೇತ್ರ ವ್ಯಾಪ್ತಿಯ ಪ್ರದೇಶದೊಳಗೆ ಒಂದು ಜೈವಿಕವೈವಿಧ್ಯ ನಿರ್ವಹಣಾ ಸಮಿತಿ (BMC) ಯನ್ನು ರಚಿಸತಕ್ಕದ್ದು.

2) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ಮುಖ್ಯ ಪ್ರಕಾರ್ಯವೆಂದರೆ, ಸ್ಥಳೀಯ ಜನರೊಡನೆ ಸಮಾಲೋಚಿಸಿ ಜನರ ಜೈವಿಕವೈವಿಧ್ಯ ರಿಜಿಸ್ಟರನ್ನು ಸಿದ್ಧಪಡಿಸುವುದು. ಈ ರಿಜಿಸ್ಟರ್, ಸ್ಥಳೀಯ ಜೈವಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಜ್ಞಾನ, ಅವುಗಳ ಔಷಧೀಯ ಅಥವಾ ಯಾವುದೇ ಇತರ ಬಳಕೆ ಅಥವಾ ಅವುಗಳ ಬಗೆಗಿನ ಯಾವುದೇ ಇತರ ಸಾಂಪ್ರದಾಯಿಕ ಜ್ಞಾನ-ಇವುಗಳ ಸಮಗ್ರ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

2) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ಇತರ ಪ್ರಕಾರ್ಯವೆಂದರೆ ಅದಕ್ಕೆ ಜೀವವೈವಿಧ್ಯ ಪ್ರಾಧಿಕಾರ ಅಥವಾ ಮಂಡಳಿಯಿಂದ ಬಂದ ಅರ್ಜಿಗಳಿಗೆ ಅಂಗೀಕಾರ ಅಥವಾ ಸಲಹೆ ಮತ್ತು ಸ್ಥಳೀಯ ವೈದ್ಯರ ಮತ್ತು ಚಿಕಿತ್ಸಕರ ಮಾಹಿತಿಗಳನ್ನು ಹೊಂದಿರತಕ್ಕದ್ದು.

## ನಮೂನೆ - I

## ಅನುಸೂಚಿ

## (ನಿಯಮ 15ನ್ನು ನೋಡಿ)

ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಪಡೆಯುವುದಕ್ಕಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿಗೆ ಮುಂಚಿತವಾಗಿ ತಿಳಿಸುವ ಅರ್ಜಿ ನಮೂನೆ.

ಪ್ರತಿಯೊಂದು ಅರ್ಜಿಯ ಜೊತೆಗೆ ಮಂಡಳಿಯ ಹೆಸರಿಗೆ ನೀಡಿದ ಚೆಕ್ ಅಥವಾ ಬ್ಯಾಂಕ್ ಹುಂಡಿ ರೂಪದಲ್ಲಿ ರೂ.1000 (ಒಂದು ಸಾವಿರ ರೂಪಾಯಿ) ಗಳ ಶುಲ್ಕವನ್ನು ಇರಿಸತಕ್ಕದ್ದು.

## ಭಾಗ – ಎ

1. ಅರ್ಜಿದಾರನ ಪೂರ್ಣ ವಿವರಗಳು

   ಎ. ಹೆಸರು

   ಬಿ. ಖಾಯಂ ವಿಳಾಸ

   ಸಿ. ಭಾರತದಲ್ಲಿ ಸಂಪರ್ಕಿಸಬಹುದಾದ ವ್ಯಕ್ತಿ/ಏಜೆಂಟ್ ಯಾರಾದರೂ ಇದ್ದರೆ ಅವರ ವಿಳಾಸ

   ಡಿ. ಸಂಸ್ಥೆಯ ರೂಪುರೇಷೆ (ಅರ್ಜಿದಾರನು ವ್ಯಕ್ತಿಯಾಗಿದ್ದಲ್ಲಿ ವೈಯಕ್ತಿಕ ಪರಿಚಯ) ದಯವಿಟ್ಟು ಸೂಕ್ತ ಅಧಿಕೃತ ದಾಖಲೆಗಳನ್ನು ಲಗತ್ತಿಸಿ.

   ಇ. ವ್ಯವಹಾರದ ಸ್ವರೂಪ

   ಎಫ್.ಭಾರತೀಯ ರೂಪಾಯಿಗಳಲ್ಲಿ ಸಂಸ್ಥೆಯ ವಹಿವಾಟು

2. ಕೋರಿರುವ ಹೊಂದುವ ಅವಕಾಶದ ಮತ್ತು ಹೊಂದುವ ಅವಕಾಶ ಪಡೆಯುವಂಥ ಜೈವಿಕ ವಸ್ತುವಿನ ಮತ್ತು ಅದರ ಬಗೆಗಿನ ಜ್ಞಾನದ ಬಗ್ಗೆ ವಿವರಗಳು ಮತ್ತು ನಿರ್ದಿಷ್ಟ ಮಾಹಿತಿ

   ಅ) ಜೈವಿಕ ಸಂಪನ್ಮೂಲಗಳ ಗುರುತು(ವೈಜ್ಞಾನಿಕ ಹೆಸರು),ಮತ್ತು ಅದರ ಸಾಂಪ್ರದಾಯಿಕ ಬಳಕೆ;

   ಆ) ಉದ್ದೇಶಿತ ಸಂಗ್ರಹಣೆಯ ಭೌಗೋಳಿಕ ಸ್ಥಳ;

   ಇ) ಸಾಂಪ್ರದಾಯಿಕ ಜ್ಞಾನದ (ಮೌಖಿಕ/ದಸ್ತಾವೇಜಿಯ)ವಿವರಣೆ/ಸ್ವರೂಪ;

   ಈ) ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವ ಯಾರೇ ಗುರುತಿಸಲಾದ ವ್ಯಕ್ತಿ/ಸಮುದಾಯ; ಸಂಗ್ರಹಿಸಬೇಕಾದ ಜೈವಿಕ ಸಂಪನ್ಮೂಲಗಳ ಪ್ರಮಾಣ (ಅನುಸೂಚಿಯನ್ನು ನೀಡಿ);

   ಎಫ್)ಯಾವ ಸಮಯದಲ್ಲಿ ಜೈವಿಕ ಸಂಪನ್ಮೂಲವನ್ನುಸಂಗ್ರಹಿಸುವುದಕ್ಕೆ ಪ್ರಸ್ತಾವಿಸಲಾಗಿದೆಯೋ ಅಂಥ ಸಮಯಾವಧಿ;

   ಜಿ) ಆಯ್ಕೆಯನ್ನು ಮಾಡುವುದಕ್ಕೆ ಕಂಪನಿಯು ಅಧಿಕಾರ ನೀಡಿರುವ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ;

   ಹೆಚ್) ಸಂಶೋಧನೆಯ ಬಗೆ ಮತ್ತು ವ್ಯಾಪ್ತಿ, ಅದರಿಂದ ಪಡೆಯಲಾಗುತ್ತಿರುವ ಮತ್ತು ಪಡೆಯುವ ನಿರೀಕ್ಷೆಯಿರುವ ವಾಣಿಜ್ಯ ಬಳಕೆ ಸೇರಿದಂತೆ ಯಾವ ಉದ್ದೇಶಕ್ಕಾಗಿ ಹೊಂದುವ ಅವಕಾಶವನ್ನು ಕೋರಲಾಗಿದೆಯೋ ಆ ಉದ್ದೇಶ;

   ಐ) ಯಾವುದೇ ಸಂಪನ್ಮೂಲಗಳ ಸಂಗ್ರಹಣೆಯಿಂದ ಜೈವಿಕವೈವಿಧ್ಯದ ಯಾವುದೇ ಘಟಕಾಂಶಕ್ಕೆ ಅಪಾಯವುಂಟಾಗುತ್ತದೆಯೇ ಮತ್ತು ಸಂಪನ್ಮೂಲಗಳನ್ನು ಹೊಂದುವ ಅವಕಾಶದಿಂದ ಯಾವುದೇ ತೊಂದರೆ ಉದ್ಭವಿಸುವುದೇ

3. ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂಥ ಯಾವುದೇ ರಾಷ್ಟ್ರೀಯ ಸಂಸ್ಥೆಯ ವಿವರಗಳು.

4. ಹೊಂದುವ ಅವಕಾಶ ಪಡೆದ ಸಂಪನ್ಮೂಲಗಳ ಪ್ರಾಥಮಿಕ ಗಮ್ಯಸ್ಥಾನ ಮತ್ತು ಸಂಶೋಧನೆ ಮತ್ತುಅಭಿವೃದ್ಧಿ ನಿರ್ವಹಿಸುವಂಥ ಸ್ಥಳದ ಗುರುತು.
5. ಅರ್ಜಿದಾರನಿಗೆ ಅಥವಾ ಆತ/ಆಕೆ ಸೇರಿದ ದೇಶಕ್ಕೆ ಬೌದ್ಧಿಕ ಆಸ್ತಿ ಹಕ್ಕಿನಿಂದ, ಉದ್ದೇಶಿತ ಅಥವಾ ಪ್ರಾಪ್ತವಾಗಬಹುದಾದ, ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಜ್ಞಾನದಿಂದ ಪಡೆದ ಪೇಟೆಂಟ್ ನಿಂದ ದೊರೆಯುವ ಲಾಭಗಳು ಸೇರಿದಂತೆ, ಆರ್ಥಿಕ ಮತ್ತು ಇತರೆ ಲಾಭಗಳು.
6. ಅರ್ಜಿದಾರನಿಗೆ ಅಥವಾ ಆತ / ಆಕೆ ಸೇರಿರುವಂಥ ದೇಶಕ್ಕೆ ಉದ್ದೇಶಿತ ಅಥವಾ ಪ್ರಾಪ್ತ ವಾಗಬಹುದಾದ ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಜ್ಞಾನದಿಂದ ದೊರೆತ ಜೈವಿಕ ತಂತ್ರಜ್ಞಾನ, ವೈಜ್ಞಾನಿಕ, ಸಾಮಾಜಿಕ ಅಥವಾ ಯಾವುದೇ ಇತರ ಪ್ರಯೋಜನಗಳು.
7. ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಸಾಂಪ್ರದಾಯಿಕ ಜ್ಞಾನದ ಬಳಕೆಯಿಂದ ಭಾರತ / ಸಮುದಾಯಗಳಿಗೆ ದೊರೆಯುವ ಸೌಲಭ್ಯಗಳ ಅಂದಾಜು.
8. ಲಾಭವನ್ನು ಹಂಚಿಕೊಳ್ಳುವ ಪ್ರಸ್ತಾವಿತ ವ್ಯವಸ್ಥೆ ಮತ್ತು ಏರ್ಪಾಡುಗಳು.
9. ಸೂಕ್ತವೆಂದು ಪರಿಗಣಿಸಿದ ಯಾವುದೇ ಇತರ ಮಾಹಿತಿ.

## ಭಾಗ - ಬಿ **ಘೋಷಣೆ**

ನಾನು/ನಾವು

- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಸಂಪನ್ಮೂಲಗಳ ಸುಸ್ಥಿರತೆಗೆ ಪ್ರತೀಕೂಲ ಪರಿಣಾಮ ಉಂಟಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಯಾವುದೇ ಪರಿಸರ ಪರಿಣಾಮ ಉಂಟಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಜೀವಿ ವ್ಯವಸ್ಥೆಗೆ ಯಾವುದೇ ತೊಂದರೆ ಎದುರಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಸ್ಥಳೀಯ ಸಮುದಾಯಗಳ ಮೇಲೆ ಪ್ರತೀಕೂಲವಾಗಿ ಪರಿಣಾಮ ಉಂಟಾಗುವುದಿಲ್ಲ;

ಎಂದು ಈ ಮೂಲಕ ಘೋಷಿಸುತ್ತೇನೆ/ವೆ.

ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ನಾನು / ನಾವು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು ಮತ್ತು ದೋಷ ಪೂರ್ಣಮಾಹಿತಿಗೆ ನಾನು/ವು ಜವಾಬ್ದಾರಿಯಾಗಿರುತ್ತೇನೆ/ವೆ.

ಸಹಿ

ಸ್ಥಳ:

ದಿನಾಂಕ:

ಹೆಸರು:

ಪದನಾಮ:

## ನಮೂನೆ - III

### (ನಿಯಮ – 22 (4) ನ್ನು ನೋಡಿ)

ಗ್ರಾಮಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿ/ಪುರಸಭೆ/ಮಹಾನಗರಪಾಲಿಕೆ

ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿ

---------- ನೇ ಆರ್ಥಿಕ ವಾರ್ಷಿಕ ವರದಿ

1. ಪೀಠಿಕೆ
2. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ರಚನೆ ಮತ್ತು ಬದಲಾವಣೆಗಳು ಏನಾದರೂ ಇದ್ದಲ್ಲಿ.
3. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ಸಭೆಗಳ ಬಗ್ಗೆ
4. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ಅಧಿನಿಯಮದ ಪ್ರಕರಣ 41 ರಡಿ ಕೈಗೊಳ್ಳಬೇಕಾದ ಪ್ರಕಾರ್ಯಗಳು ಮತ್ತು ಕೈಗೊಂಡ ಕಾರ್ಯಚಟುವಟಿಕೆಗಳ ವಿವರಣೆ
5. ಧಾವೆಗಳನ್ನು ಹೂಡಿದ ಮತ್ತು ಅವುಗಳಲ್ಲಿ ರಕ್ಷಿಸಲಾದ ಧಾವೆಗಳ ವಿವರಗಳು
6. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ಹಣಕಾಸು, ಲೆಕ್ಕಗಳು ಮತ್ತು ಲೆಕ್ಕ ಪರಿಶೋದನೆ ಬಗ್ಗೆ ವರದಿ
7. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗೆ ಗಣ್ಯವ್ಯಕ್ತಿಗಳ ಹಾಗೂ ತಜ್ಞರ ಬೇಟಿ ಇತ್ಯಾದಿ
8. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯು ಕೈಗೊಂಡ ಇನ್ನಿತರ ಅತೀ ಪ್ರಾಮುಖ್ಯ ಕಾರ್ಯಕ್ರಮ ಗಳ ಬಗ್ಗೆ ವಿವರ.

------------